

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 222 | Tuesday 13-05-2025 | E-mail : maruti.b.hosamani76@gmail.com | Page: 4 | Price : Rs. 1/-


## ಭಾಗ್ಯಶ್ರೀ ಕುಲಿಗೋಡ ಶ್ರೀ ಸಿದ್ದರಾಮೇಶ್ವರ – ಪ್ರೌಢ ಶಾಲೆಗೆ ಪ್ರಥಮ






**ಸಿಹಿ ಕಹಿ ಸುದ್ದಿ,**
**ಮುಗಳಖೋಡ** : ರಾಯಬಾಗ ತಾಲೂಕಿನ ಮುಗಳಖೋಡ ಪಟ್ಟಣದ ಶ್ರೀ ಸಿದ್ದಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಶ್ರೀ ಸಿದ್ದರಾಮೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿನಿಕುಮಾರಿಭಾಗ್ಯಶ್ರೀಕುಲಿಗೋಡ ಪ್ರತಿಶತ 96.32% ಹಾಗೂ ಪ್ರಿಯಾ ಹಳ್ಳೂರ 95.04% ಮತ್ತು ಪ್ರತಿಭಾ ಶೇಗುಣಸಿ 94.88% ಅಂಕಗಳನ್ನು ಗಳಿಸುವ ಮೂಲಕ ಹಾಗೂ ಸಮಾಜ ವಿಜ್ಞಾನದಲ್ಲಿ ಮೂರು ಜನ ವಿದ್ಯಾರ್ಥಿಗಳೂ 100 ಕ್ಕೆ 100 ಅಂಕಗಳನ್ನು ಗಳಿಸುವ ಮೂಲಕ ನಮ್ಮ ಪ್ರೌಡ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಹಾಗೂ ಒಟ್ಟು ವಿದ್ಯಾರ್ಥಿಗಳಲ್ಲಿ ಷುಣುಟಿಛಿಣುಂಟಿ–10 ಜುಢಿಣ ಛಿಟಚಿ–17 ಜಛಿಂಟಿಜ ಛಿಟಚಿ–04 ಈ ರೀತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ಪಡೆದು ನಮ್ಮ ಪ್ರೌಢ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಇಂಗ್ಲಿಷ್ ಉಪನ್ಯಾಸಕರಾದ ಬಿ.ಬೀ ಬಂಡಿಗನಿ ಅವರು ಪತ್ರಿಕಾ ವರದಿಯಲ್ಲಿ ತಿಳಿಸಿದ್ದಾರೆ ನಮ್ಮ ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಕೂಡಾ ವಿವಿಧ ಕ್ರೀಡೆಯಲ್ಲಿ ರಾಜ್ಯ ಮಟ್ಟದವರೆಗಿನ ಕ್ರೀಡೆಗಳಲ್ಲಿಯೂ ಭಾಗವಹಿಸಿ ನಮ್ಮ ಪ್ರೌಢ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಆದ್ದರಿಂದ ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಅಶೋಕ್ ಕೊಪ್ಪದ ಅವರ ನಿರ್ದೇಶನದಂತೆ ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳ ಮನೆಗಳಿಗೆ ತೆರಳಿ ಸತ್ಕರಿಸಲಾಯಿತು ಈ ಸಮಯದಲ್ಲಿ ಸಿಬ್ಬಂದಿಗಳಾದ ಪಿ.ಯು ಕಾಲೇಜಿನ ಪ್ರಾಚಾರ್ಯರಾದ ಎಸ್.ಜಿ ಹಂಚಿನಾಳ. ಪ್ರಧಾನಗುರುಗಳಾದ ವ್ಹಿ.ಎಂ ಕರಡಿ. ಹಾಗೂ ಸಿಬ್ಬಂದಿಗಳಾದ ಮಹಾನಿಂಗ ಕೊಪ್ಪದ ವಾಯ್.ಕೆ ಕಾಕಂಡಕಿ ಜಿ.ಎಲ್ ಸಂಗಾನಟ್ಟಿ ಎ.ಎಲ್ ಪೂಜೇರಿ ಅಮರ ಮ್ಯಾಗೇರಿ ಹಾಗೂ ಎಲ್ಲಾ ಸಿಬ್ಬಂದಿಗಳು ಭಾಗವಹಿಸಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪರಶುರಾಮ.ತೆಳಗಡೆ. ರಾಯಬಾಗ**

## ಇಬ್ಬರು ಪಿಡಿಒ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸದ – ಇ.ಓ ಖಾಲಿದ್ ಅಹ್ಮದ್





**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಒಂದು ಕಾಮಗಾರಿಗೆ ಮೀಸಲಿಟ್ಟ ಹಣವನ್ನು ಅನ್ಯ ವಿಷಯಕ್ಕೆ ಹಣ ಬಳಕೆ ಮಾಡಿ ಕೊಳ್ಳುವುದು ಅಪರಾಧ ಎಂದು ಸರಕಾರದ ಸುತ್ತೋಲೆ ಇದೆ. ಆದರೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ 2022–23 ನೇ. ಸಾಲಿನಲ್ಲಿ ಸಾದಾಪುರ ಪಂಚಾಯತಿ ಪಿಡಿಓ ಆಗಿ ಸೇವೆ ಸಲ್ಲಿಸಿದ ಶಿವಗೇನಿ 9 ಲಕ್ಷ 62 ಸಾವಿರ ಹಣ ದುರ್ಬಳಕೆ ಮಾಡಿ ಕೊಂಡಿರುವ ಆರೋಪ ಕೇಳಿ ಬಂದಿದೆ.

2022–23 ನೇ. ಸಾಲಿನಲ್ಲಿ ನೆರೆ ಹಾವಳಿ ಬಂದ ಹಿನ್ನೆಲೆಯಲ್ಲಿ ಮಾನ್ವಿ ತಾಲೂಕಿನ ಚಿಕ್ಕಕೊಟ್ನೇಕಲ್ ಮತ್ತು ಸಾದಾಪುರ ಪಂಚಾಯತಿ ವ್ಯಾಪ್ತಿಯ ಅಂಗನವಾಡಿ, ಸರಕಾರಿ ಶಾಲೆ ಹಾಗೂ ಆರೋಗ್ಯ ಕೇಂದ್ರಗಳನ್ನು ರಿಪೇರಿ ಮಾಡುವ ಸಲುವಾಗಿ ರಾಯಚೂರುಪಂಚಾಯತಿರಾಜ್‌ಇಂಜಿನಿಯರಿಂಗ್ ಇಲಾಖೆಯಿಂದ ಟೆಂಡರ್ ಕರೆಯಲಾಗಿತ್ತು. ಗುತ್ತೇದಾರ ಬಸನಗೌಡ ಅವರು ಕಾಮಗಾರಿ ಜವಾಬ್ದಾರಿ ವಹಿಸಿ ಕೊಂಡಿದ್ದಾರೆ.

ಗುತ್ತೇದಾರ ಬಸನಗೌಡ ಅವರು ಕಳೆದ ಒಂದು ವರ್ಷದಿಂದ ಮಾನ್ವಿ ತಾಲೂಕ ಪಂಚಾಯತಿ ಇ.ಓ ಖಾಲಿದ್ ಅಹ್ಮದ್ ಹತ್ತಿರ ಅಲೆದಾಡಿದರು ಸಹ ಈ ಹಿಂದೆ 2022–23 ನೇ. ಸಾಲಿನಲ್ಲಿ ಚಿಕ್ಕಕೊಟ್ನೇಕಲ್ ಹಾಗೂ ಸಾದಾಪುರ ಪಂಚಾಯತಿಯಲ್ಲಿ ಸೇವೆ ಸಲ್ಲಿಸಿದ ಇಬ್ಬರು ಪಿಡಿಓ ವಿರುದ್ಧ ಹಣ ದುರ್ಬಳಕೆ ಮಾಡಿಕೊಂಡ ಹಿನ್ನೆಲೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಬೇಕು ಎಂದು ರಾಯಚೂರು ಜಿಲ್ಲಾ ಪಂಚಾಯತಿ ಸಿಇಓ ಅವರು ಸೂಚಿಸಿದರು ನಮಗೆ ಯಾವುದೇ ನ್ಯಾಯ ಸಿಕ್ಕಿಲ್ಲ ಎಂದು ಗುತ್ತೇದಾರ ಬಸನಗೌಡ ಆರೋಪಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಸಂಸ್ಕಾರಯುತ ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ – ಯತೀಶ್.ಎಂ ಸಿದ್ದಾಪುರ ಅನಿಸಿಕೆ

**ಸಿಹಿ ಕಹಿ ಸುದ್ದಿ,**
**ಚಳ್ಳಕೆರೆ :** ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣವನ್ನು ನೀಡುವುದರಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಸ್ವಯಂ ಸೇವಕ ಯತೀಶ್ ಎಂ ಸಿದ್ದಾಪುರ ತಿಳಿಸಿದ್ದಾರೆ. ನಗರದ ಶ್ರೀಶಾರದಾಶ್ರಮದಲ್ಲಿ ಮಕ್ಕಳಿಗಾಗಿ ಆಯೋಜಿಸಿದ್ದ "ವಿವೇಕವಿಹಾರ"ವಿದ್ಯಾರ್ಥಿಶಿಬಿರದಲ್ಲಿಪಾಲ್ಗೊಂಡು ಅವರು ಮಾತನಾಡಿದರು. ಈ ಶಿಬಿರದ ಪ್ರಯುಕ್ತ ಮಕ್ಕಳಿಗೆ ಭಜನೆ, ವಿವಿಧ ಮಂತ್ರಗಳ ಪಠಣ, ಸೃಜನಶೀಲತೆಯನ್ನು ಬೆಳೆಸುವ ಆಟಗಳನ್ನು ಸಂತೋಷ ಕುಮಾರ ಅವರ ನೇತೃತ್ವದಲ್ಲಿ ಆಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಾತಾಜೀ ತ್ಯಾಗಮಯೀ, ಮಾತಾಜೀ ಜ್ಯೋತ್ಸ್ನಾಮಯೀ, ಮದ್ದಿಹಳ್ಳಿಯ ಜಗನ್ನಾಥ, ಮಮತ ಕೃಷ್ಣ, ಸಂಗೀತ ವಸಂತಕುಮಾರ್, ದೈವಿಕ್, ಹರ್ಷಿತಾ, ಪ್ರತೀಕ್ಷಾ, ಯುಕ್ತ, ಯಶಸ್ಸು, ದವನ್, ಧ್ರುವ, ನಿಖಿಲೇಶ್ ಯಾದವ್, ಯಶಸ್ವಿ,ಲಕ್ಷ್ಮೀ, ಸಮರ್ಥ್,ಕಿರಣ್, ಮನ್ವಿತ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

**ವರದಿ:ಯತೀಶ್.ಎಂ ಸಿದ್ದಾಪುರ,ಚಳ್ಳಕೆರೆ.**



## ಇ–ಆಸ್ತಿ ಉತಾರೆ ಪೂರೈಕೆಗಾಗಿ ನಾಗರಿಕರಿಂದ ಲಬೋ ಲಬೋ!



**ನಗರಸಭೆಯ ಕರ ವಸೂಲಿ ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇದ್ದು, ಇ– ಆಸ್ತಿ ನಿರ್ವಹಣೆಯಲ್ಲಿ ವಿಳಂಬವಾಗುತ್ತಿದೆ. ಇಲ್ಲಿ ಐದು ಜನರ ಸಿಬ್ಬಂದಿಯ ಅಗತ್ಯವಿದ್ದು ಇದೀಗ ಕೇವಲ ಇಬ್ಬರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು.**

**। ಜಗದೀಶ ಈಟಿ**
**ಪೌರಾಯುಕ್ತ, ನಗರಸಭೆ.**
**ರಬಕವಿ– ಬನಹಟ್ಟಿ**

**ರಬಕವಿ–ಬನಹಟ್ಟಿ** : ಇಲ್ಲಿಯ ನಗರಸಭೆಯಲ್ಲಿ ಇ–ಆಸ್ತಿ ಉತಾರೆ ಪೂರೈಕೆ ಕುರಿತಂತೆ ಸಾಕಷ್ಟು ಗೊಂದಲಗಳಿದ್ದು, ದಿನಕ್ಕೊಂದು ಕಾಗದ ಪತ್ರಗಳನ್ನು ನೀಡುವಂತೆ ಅಧಿಕಾರಿಗಳು ಪೀಡಿಸುತ್ತಿದ್ದು ಇದರಿಂದಾಗಿ ಸಾರ್ವಜನಿಕರು ಹೈರಾಣಾಗಿ ಲಬೋ ಲಬೋ ಎನ್ನುವಂತಾಗಿದೆ. ಇ – ಉತಾರೆಗಾಗಿ ದಿನನಿತ್ಯ ನಗರಸಭೆಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ನಗರಸಭೆಯಲ್ಲಿ ಈಗಾಗಲೇ ನಾಲ್ಕಾರು ತಿಂಗಳುಗಳ ಹಿಂದೆಯೇ ಕಾಗದ ಪತ್ರಗಳನ್ನು ಪೂರೈಕೆ ಮಾಡಿದವರಿಗೆ ಇ– ಆಸ್ತಿಯ ಉತಾರೆಗಳನ್ನು ನಗರಸಭೆಯವರು ಪೂರೈಕೆ ಮಾಡುತ್ತಿಲ್ಲ. ಇ– ಆಸ್ತಿಗಾಗಿ ಪೂರೈಕೆ ಮಾಡಿದ ಕಾಗದ ಪತ್ರಗಳನ್ನು ಕೂಡಾ ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂದು ರಬಕವಿ ಬನಹಟ್ಟಿ ನಗರಸಭೆಯ ಸದಸ್ಯ ಶ್ರೀಶೈಲ ಬೀಳಗಿ ಆರೋಪಿಸಿದರು.

ಅವರು ಮಂಗಳವಾರ ಇಲ್ಲಿನ ನಗರಸಭೆಯಲ್ಲಿ ಇ– ಆಸ್ತಿ ಉತಾರೆ ಪೂರೈಕೆಯಲ್ಲಿಯ ಗೊಂದಲಗಳ ಕುರಿತು ಪೌರಾಯುಕ್ತರೊಂದಿಗೆ ಮಾತನಾಡುತ್ತ ವಿಷಯ ತಿಳಿಸಿದರು.

ಕೆಲ ದಿನಗಳ ಹಿಂದೆ ಕಾಗದ ಪತ್ರಗಳನ್ನು ನೀಡಿದವರಿಗೆ ಋಣಭಾರ ಇಲ್ಲದ ಕಾಗದ ಪತ್ರ ನೀಡುವಂತೆ ತಿಳಿಸಿದರು. ಪಿತ್ರಾರ್ಜಿತ ಆಸ್ತಿಗಳು ಇದ್ದರೆ 2004 ರ ಹಿಂದಿನ ಋಣ ಭಾರವಿಲ್ಲದ ಪತ್ರವನ್ನು ನೀಡಬೇಕು ಎಂದು ಹೇಳಿದರು. ಈ ಕಾಗದ ಪತ್ರಗಳನ್ನು ಪಡೆಯಲು ನಾಗರಿಕರು ತೇರದಾಳದ ಸಬ್ ರಿಜಿಸ್ಟ್ರಾರ್ ಕಚೇರಿಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬಡ ನೇಕಾರ, ಕೂಲಿಕಾರರ ಸಮುದಾಯಕ್ಕೆ ಆರ್ಥಿಕವಾಗಿ ಖಚಿ9ನ ಹೊಣೆಯಾಗಿದೆ. ಈಗ ಹೆಸ್ಕಾಮ್ ನಿಂದ ಯಾವುದೇ ಆಕ್ಷೇಪಣೆ ಇಲ್ಲ ಎಂಬ ಪ್ರಮಾಣವನ್ನು ಪತ್ರ ತರುವಂತೆ ಹೇಳುತ್ತಿದ್ದಾರೆ. ಇದರಿಂದಲೂ ಕೂಡಾ ಜನರಿಗೆ ತೊಂದರೆಯಾಗಿದೆ ಎಂದು ನಗರದ ನಿವಾಸಿ ಅಶೋಕ ರಾವಳ ಹಾಗೂ ಶ್ರೀಶೈಲ ಗಸ್ತಿ ತಿಳಿಸಿದರು.

ನಗರಸಭೆಯಲ್ಲಿ ಅಧಿಕಾರಿಗಳು ಜನಪತ್ರಿನಿಧಿಗಳಿಗೆ ಯಾವುದೇ ರೀತಿ ಸರಿಯಾಗಿ ಸ್ಪಂದನೆ ನೀಡುತ್ತಿಲ್ಲ. ಜನಪ್ರತಿನಿಧಿಗಳು ಮೂರು ಗಂಟೆಗಳ ಕಾಲ ಅಧಿಕಾರಿಗಳ ಮುಂದೆ ಕುಳಿತರೂ ಕೂಡ ಯಾವುದೆ ಕೆಲಸವನ್ನು ಮಾಡಿ ಕೊಡುತ್ತಿಲ್ಲ. ನಗರಸಭೆಯ ಅಧಿಕಾರಿಗಳಿಂದ ಇದೇ ರೀತಿಯ ಗೊಂದಲದ ಕಾರ್ಯ ಮುಂದುವರೆದರೆ ಮುಂದಿನ ದಿನಗಳಲ್ಲಿ ನಗರಸಭೆಯ ಮುಂಭಾಗದಲ್ಲಿ ನಗರಸಭೆಯ ಸದಸ್ಯರು ಮತ್ತು ಸಾರ್ವಜನಿಕರು ಕೂಡಿಕೊಂಡು ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ.

ಬಾಗಲಕೋಟೆ ಜಿಲ್ಲಾಧಿಕಾರಿಗಳು ಇತ್ತ ಗಮನ ನೀಡಬೇಕು ಎಂದು ಶ್ರೀಶೈಲ ಬೀಳಗಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಕಾರ್ಯಾಧ್ಯಕ್ಷ ಅರುಣ ಬುದ್ನಿ, ಸಂಜಯ ತೆಗ್ಗಿ, ಗೌರಿ ಮಿಳ್ಳಿ, ರವಿ ಕೊರ್ತಿ, ಶ್ರೀಶೈಲ ಆಲಗೂರ, ವಿಜಯ ಕಲಾಲ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಸಮುದಾಯ ಭವನಗಳ ಯೋಗ್ಯ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಿ



**ರಬಕವಿ :** ಸರಕಾರದ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಸಮಾಜವನ್ನು ಮುನ್ನಡೆಸಿಕೊಂಡು ಹೋಗಿ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಅವರು ಸಮೀಪದ ರಾಮಪುರದಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಐದು ಲಕ್ಷ ರೂ. ಮೊತ್ತದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಸನ್ 2023–24 ನೇ ಸಾಲಿನ ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಯೋಜನೆಯಡಿಯಲ್ಲಿ ರಾಮಪೂರದ ಸಿಟಿಎಸ್ ನಂ. 3427, 3248 ರಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಐದು ಲಕ್ಷ ರೂ ಮಂಜೂರಿ ಮಾಡಲಾಗಿದ್ದು, ಸಣ್ಣ ಸಣ್ಣ ಸಮುದಾಯಗಳ ಇತರೆ ಕಾರ್ಯಕ್ರಮಗಳಿಗೆ ಸಮುದಾಯ ಭವನ ಅವಶ್ಯವಾಗಿದ್ದು ಇದನ್ನು ಸದ್ಬಳಕೆ ಮಾಡಿಕೊಂಡು ಸಮಾಜದ ಕಾರ್ಯಕ್ರಮಗಳನ್ನು ಮಾಡಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ವಿದ್ಯಾ ದಭಾಡಿ, ಶ್ರೀಶೈಲ ಬೀಳಗಿ, ಅರುಣ ಬುದ್ನಿ, ಪ್ರಕಾಶ ಸಿಂಘಣ, ರಾಮು ಭಜಂತ್ರಿ, ವಿಜಯ ಕಲಾಲ, ಪರಶುರಾಮ ಕಲಾಲ, ಪರಶುರಾಮ ಭಜಂತ್ರಿ, ಶ್ರೀಶೈಲ ಆಲಗೂರ, ಈರಣ್ಣ ಅರ್ಜುಣಗಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಜ್ಞಾನೋದಯ ಇಂಗ್ಲಿಷ್ ಮಾಧ್ಯಮ ಶಾಲೆಯ ಫಲಿತಾಂಶ ಶೇ.75.56 ರಷ್ಟು: ಸಾಗರ ಕಾರ್ವೇಕರ್ ಪ್ರಥಮ ಸ್ಥಾನ

**ರಬಕವಿ :** ಸಮೀಪದ ರಾಂಪುರದ ಜ್ಞಾನೋದಯ ಇಂಗ್ಲಿಷ್ ಮಾಧ್ಯಮ ಶಾಲೆಯ ಫಲಿತಾಂಶ ಶೇ. 75.56 ರಷ್ಟಾಗಿದ್ದು, 45 ವಿದ್ಯಾರ್ಥಿಗಳಲ್ಲಿ 34 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 18 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 15 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು ಓರ್ವ ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಸಾಗರ ಕಾರ್ವೇಕರ ಪ್ರಥಮ ಸ್ಥಾನದಲ್ಲಿ, ಮಲ್ಲಿಕಾರ್ಜುನ ಮುರಗೋಡ ದ್ವಿತೀಯ, ಸಮರ್ಥ ನಾಗರಾಳ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸಾಗರ ಕಾರ್ವೇಕರ (ಶೇ.98.88), ಮಲ್ಲಿಕಾರ್ಜುನ ಮುರಗೋಡ (ಶೇ.98.24), ಸಮರ್ಥ ನಾಗರಾಳ (ಶೇ.97.28), ತಾನಿಯಾ ಠಾಣೇಕರ್ (ಶೇ.97.12),



ಸುಪ್ರಿತ ಬಿಳಿಮೀಸಿ (ಶೇ.96.48), ತೇಜಸ್ ಬಿಳ್ಳೂರ (ಶೇ.96), ಗೀತಾಂಜಲಿ ದಳವಿ (ಶೇ.95.04), ಸ್ನೇಹಾ ಬಾವಲತ್ತಿ(ಶೇ.95.04)ಅಂಕಗಳನ್ನುಪಡೆದುಕೊಂಡು ಉತ್ತಮ ಸಾಧನೆಯನ್ನು ಮಾಡಿದ್ದಾರೆ ಎಂದು ಆಡಳಿತಾಧಿಕಾರಿ ಏಕನಾಥ ಗಂಥಡೆ ತಿಳಿಸಿದರು.

## ನಗರದಲ್ಲಿ ಹಜರತ್ ರಹಿಮಾನ ಶ್ಯಾವಲಿ ಶರಣರ ಉರುಸು – ಕುರಿತು ಪೂರ್ವಭಾವಿ ಸಭೆ

**ಸಿಹಿ ಕಹಿ ಸುದ್ದಿ,**
**ನರೇಗಲ್ :** ಗಜೇಂದ್ರಗಡ ತಾಲೂಕಿನ ನರೇಗಲ್ಲ ನಗರದಲ್ಲಿ ಹಜರತ್ ರಹಿಮಾನ ಶ್ಯಾವಲಿ ಶರಣರ ಉರುಸು 21–5–2025 ರಿಂದ 23–5–2025 ರ ವರೆಗೆ ಜರುಗಲಿದೆ. ಈ ಕಾರ್ಯಕ್ರಮದ ಅಂಗವಾಗಿ ಪೂರ್ವಭಾವಿ ಸಭೆ ಜರುಗಿತು. ಈ ಉರುಸು ಹಜರತ್ ಅಬ್ದುಲ್ ರಹಿಮಾನ್ ಶ್ಯಾವಲಿ ಗಳವರ ಕರಸಂಜಾತರಾದ ಹಜರತ್ ಸಯ್ಯದ್ ಮಂಜೂರ ಹುಸೇನ ಶ್ಯಾವಲಿ ಗಳವರ ಅಮೃತ ಹಸ್ತದಿಂದ ನೆರವೇರುವದು.

ಈ ಧಾರ್ಮಿಕ ಕಾರ್ಯಕ್ರಮವು ಸತತವಾಗಿ 3 ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ.

ಇದೆ ಸಮಯದಲ್ಲಿ ಪೊಲೀಸ್‌ಅಧಿಕಾರಿಗಳು ಹಾಗೂ ಹಲವಾರುಗಣ್ಯಮಾನ್ಯರುಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಈ ಪೂರ್ವಭಾವಿ ನರೇಗಲ್ಲನ ಎಲ್ಲಾ ವಾರ್ಡಿನ ಗಣ್ಯ ಮಾನ್ಯರು ಹಾಗೂ ಎಲ್ಲಾಮತ ಭಾಂಧವರು ಪೂರ್ವಭಾವಿ ಸಭೆಯಲ್ಲಿ ಹಾಜರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ. ರೋಣ.ಗದಗ**





**ರಬಕವಿ–ಬನಹಟ್ಟಿ : ಬನಹಟ್ಟಿಯ ಬನಶಂಕರಿ ದೇವಸ್ಥಾನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ಇಬ್ಬರು ಅಂಗವಿಕಲರಿಗೆ ವ್ಹೀಲ್ ಚೇರ್ ಮತ್ತು ಒಬ್ಬರಿಗೆ 'ಯು' ಆಕೃತಿಯ ವಾಕರ್ ನೀಡಲಾಯಿತು. ಜಮಖಂಡಿ ವಿಭಾಗದ ಯೋಜನಾಧಿಕಾರಿ ನಿಂಗಪ್ಪ ಗುಡಸಲಮನಿ ಮತ್ತು ಬನಹಟ್ಟಿ ವಿಭಾಗದ ಮೇಲ್ವಿಚಾರಕ ಶಿವಾನಂದ ಎಂ. ವೈ. ಹಾಜರಿದ್ದರು.**

# ಮುಂಬರುವ ದಿನಗಳಲ್ಲಿ ಹೋಬಳಿ ಮಟ್ಟದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮ್ಮೇಳನ: ರೆಡ್ಡಿ ಶ್ರೀನಿವಾಸ



**ಕೊಪ್ಪಳ:** ಮುಂಬರುವದಿನಗಳಲ್ಲಿಹೋಬಳಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗುವುದ ಎಂದು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಾಜ್ಯ ಸರ್ಕಾರವು ಜಾರಿಗೊಳಿಸಿರುವ ಮಹತ್ತರವಾದ ಐದು ಗ್ಯಾರಂಟಿ ಯೋಜನೆಗಳು ಬಡ, ಹಿಂದುಳಿದ ವರ್ಗಗಳ ಹಾಗೂ ಜನ ಸಾಮಾನ್ಯರ ಬಧುಕಿಗೆ ಆಸರೆಯಾಗಿವೆ. ಈ ಯೋಜನೆಗಳ ಅನುಷ್ಠಾನದಲ್ಲಿ ಕೊಪ್ಪಳ ಜಿಲ್ಲೆಯು ಉತ್ತಮ ಪ್ರಗತಿ ಸಾಧಿಸಿದೆ. ಐದು ಗ್ಯಾರಂಟಿ ಯೋಜನೆಗಳಡಿ ಲಾಭ ಪಡೆದ ಅರ್ಹ ಫಲಾನುಭವಿಗಳೊಂದಿಗೆ ಹೋಬಳಿ ಮಟ್ಟದಲ್ಲಿ ಸಮ್ಮೇಳನ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಮರಳಿ ಗ್ರಾಮದಲ್ಲಿ ಈ ಸಮ್ಮೇಳನವನ್ನು ಆಯೋಜಿಸಲು ಪೂರ್ವಭಾವಿ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ಯಾರಂಟಿ ಯೋಜನೆಗಳ ಯೋಜನೆಗಳಡಿ ಜಿಲ್ಲೆಯಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸಬೇಕು. ಈ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತ್ ಸಭೆಗಳಲಿಯೂ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಬೇಕು. ಇದರಿಂದ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸ್ಥಳೀಯ ಹಂತದಲ್ಲಿಯೇ ಪರಿಹರಿಸಲು ಅನುಕೂಲವಾಗುತ್ತದೆ. ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ, ಯುವನಿಧಿ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳಡಿಜಿಲ್ಲೆಯಯಾವುದೇಅರ್ಹ ಫಲಾನುಭವಿಗಳು ಹೊರಗುಳಿಯದಂತೆ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳ ಲಾಭ ಪಡೆದು ಬದುಕು ಕಟ್ಟಿಕೊಂಡು, ಇತರರಿಗೆ ಮಾದರಿಯಾದ ಫಲಾನುಭವಿಗಳ ಯಶೋಗಾಥೆಗಳ ಮಾಹಿತಿಯನ್ನು ಸಂಗ್ರಹಿಸಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಕೂಡಲೇ ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಐದು ಗ್ಯಾರಂಟಿ ಯೋಜನೆಗಳ ಪ್ರಗತಿ: ಗೃಹಲಕ್ಷ್ಮೀ ಯೋಜನೆಯಡಿ ಕೊಪ್ಪಳ ಜಿಲ್ಲೆಯ 3,24,354 ಫಲಾನುಭವಿಗಳಿಗೆ ಜನವರಿ-2025ರ ಅಂತ್ಯದವರೆಗೆ ಡಿಬಿಟಿ ಮೂಲಕ 1093.09 ಕೋಟಿ ರೂ.ಗಳನ್ನು ಪಾವತಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ ಮಾರ್ಚ್-2025ರ ಅಂತ್ಯದವರೆಗೆ2,77,414ಗ್ರಾಹಕರಿಗೆಉಚಿತ ವಿದ್ಯುತ್ ಸೌಲಭ್ಯ ದೊರೆತಿದ್ದು, ಇದಕ್ಕಾಗಿ 231.35 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.ಅನ್ನಭಾಗ್ಯಯೋಜನೆಯಡಿ ಹೆಚ್ಚುವರಿ ಅಕ್ಕಿಯ ಬದಲಿಗೆ ಡಿಸೆಂಬರ್-2024ರ ಅಂತ್ಯದವರೆಗೆ 2,99,213 ಕಾರ್ಡುದಾರರಿಗೆ 18.39 ಕೋಟಿ ರೂ.ಗಳ ವೆಚ್ಚ ಭರಿಸಲಾಗಿರುತ್ತದೆ. 2025ರ ಫೆಬ್ರವರಿ ಮಾಹೆಯಿಂದ ಹೆಚ್ಚುವರಿ 5 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ. ಶಕ್ತಿಯೋಜನೆಯಡಿ ಮಾರ್ಚ್-2025ರಅಂತ್ಯದವರೆಗೆ7ಕೋಟಿ 2 ಲಕ್ಷದ 25 ಸಾವಿರ 246 ಮಹಿಳೆಯರು ಕಲ್ಯಾಣ ಕರ್ನಾಟ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದು, ಇದಕ್ಕಾಗಿ 248.09 ಕೋಟಿ ರೂ.ಗಳ ಖರ್ಚಾಗಿದೆ. ಯುವನಿಧಿ ಯೋಜನೆಯಡಿ ಇಲ್ಲಿಯವರೆಗೆ (ಏಪ್ರಿಲ್-2025) 8633 ನೋಂದಣಿಯಾಗಿದ್ದು, ಒಟ್ಟು ಮೊತ್ತ ರೂ. 10.05ಕೋಟಿಗಳನ್ನುಪಾವತಿಸಲಾಗಿರುತ್ತದೆ ಎಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಮಂಜುನಾಥ ಗೋಂಡಬಾಳ, ಖಾಸಿಂಸಾಬ ಮರ್ದಾನಸಾಬ, ನಾಗರಾಜ್ ಅರಳಿ, ಅಮರೇಶ ಎಸ್.ಜಿ., ಗ್ಯಾರಂಟಿ ಯೋಜನೆಗಳ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಸೇರಿದಂತೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರು, ಜಿಲ್ಲೆಯ ವಿವಿಧ ತಾಲ್ಲೂಕುಗಳ ಅಧ್ಯಕ್ಷರು ಹಾಗೂ ಗ್ಯಾರಂಟಿ ಯೋಜನೆ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗೆ ಚಾಲನೆ

## ನಿಖರವಾದ ಮಾಹಿತಿ ನೀಡಿ ಸಮೀಕ್ಷೆಗೆ ಸಹಕರಿಸಿ: ಜಿಲ್ಲಾಧಿಕಾರಿ ನಲಿನ ಅತುಲ್



**ಕೊಪ್ಪಳ :** ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಲು ಕೈಗೊಳ್ಳಲಾಗುತ್ತಿರುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗಾಗಿ ಗಣತಿದಾರರು (ಸಮೀಕ್ಷಾಕಾರರು) ನಿಮ್ಮ ಮನೆಗೆ ಬಂದಾಗ ಸಾರ್ವಜನಿಕರು ಅವರಿಗೆ ಸಹಕರಿಸುವ ಮೂಲಕ ನಿಖರವಾದ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ನಲಿನ ಅತುಲ್ ಹೇಳಿದರು.

ಅವರುಸೋಮವಾರಕೊಪ್ಪಳನಗರದ12ನೇವಾರ್ಡಿನ ಬಸವೇಶ್ವರ ನಗರದಲ್ಲಿ ಪೌರಕಾರ್ಮಿಕರಾದ ಶಾಂತ ಗಂಡ ಗಾಳೆಪ್ಪ ದೊಡ್ಡಮನಿ ಹಾಗೂ ಸೌರಮ್ಮ ಗಂಡ ಭರಮಪ್ಪ ಅವರ ಮನೆಯಿಂದ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗೆ ಮೊಬೈಲ್ ಆ್ಯಪ್ ಮೂಲಕ ಚಾಲನೆ ನೀಡಿ ಮಾತನಾಡಿದರು.

ಸರಿ ಸುಮಾರು 16 ಲಕ್ಷಕ್ಕಿಂತಲೂ ಹೆಚ್ಚಿನ ಜನ ಸಂಖ್ಯೆ ನಮ್ಮ ಕೊಪ್ಪಳ ಜಿಲ್ಲೆಯಲ್ಲಿದೆ. ಪ್ರತಿಯೊಂದು ಮನೆಗೆ ತೆರಳಿ ಸಮೀಕ್ಷೆ ಮಾಡಬೇಕೆಂಬ ಸರ್ಕಾರವು ನಿರ್ದೇಶನ ಮಾಡಿದ್ದು, ಇಂದಿನಿಂದ ಈ ಸಮೀಕ್ಷೆ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ. ಈ ಸಮೀಕ್ಷೆಯನ್ನು ಸಮರ್ಪಕವಾಗಿ ಕೈಗೊಳ್ಳಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿದ್ದು, ಸಮೀಕ್ಷೆಗಾಗಿ ಒಂದು ಮತಗಟ್ಟೆ ಒಬ್ಬರಂತೆ ಒಟ್ಟು 1315 ಗಣತಿದಾರರನ್ನು ಜಿಲ್ಲೆಯಲ್ಲಿ ನೇಮಕ ಮಾಡಲಾಗಿದೆ. ಸಮೀಕ್ಷೆಗೆ ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರಗಳು ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದಿದ್ದು, ತಾಲ್ಲೂಕು ಮಟ್ಟದ ಮಾಸ್ಟರ್ ಟ್ರೈನರಗಳಿಗೆ ಹಾಗೂ 250 ರಿಂದ 300 ಶಿಕ್ಷಕರಿಗೆ ಗಣತಿದಾರರ ತರಬೇತಿ ನೀಡಲಾಗಿದ್ದು, ಈ ಸಮೀಕ್ಷೆಯನ್ನು ಆ್ಯಪ್ ಮೂಲಕ ನಡೆಸಲಾಗುತ್ತಿದೆ ಎಂದರು.

ಸಮೀಕ್ಷೆಯು 2025ರ ಮೇ 5 ರಿಂದ 17ರ ವರೆಗೆ ಮೊದಲನೇ ಹಂತದಲ್ಲಿ ಮನೆ-ಮನೆಗೆ ಸಮೀಕ್ಷೆ ಹಾಗೂ ಮೇ 19 ರಿಂದ 21ರ ವರೆಗೆ ಎರಡನೇ ಹಂತದಲ್ಲಿ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಮತ್ತು ಮೇ 19ರಿಂದ23ರವರೆಗೆಮೂರನೇಹಂತದಲ್ಲಿಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶವಿರುತ್ತದೆ. ಜಿಲ್ಲೆಯ ಪ್ರತಿಯೊಂದು ಮನೆಯ ಸಮೀಕ್ಷೆ ಮಾಡುವ ಗುರಿಯನ್ನು ಹೊಂದಲಾಗಿದೆ. ಈ ಒಂದು ಸಮೀಕ್ಷೆಯಲ್ಲಿ ನಾವೂ ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ ಸರ್ಕಾರಕ್ಕೆ ಒಪ್ಪಿಸುತ್ತೇವೆ. ಆಧಾರ್ ಕಾರ್ಡ್ ಅಥವಾ ರೇಷನ್ ಕಾರ್ಡ್ ಈ ಎರಡರಲ್ಲಿ ಯಾವುದಾದರು ಒಂದರ ಮುಖಾಂತರವೇ ಮಾಹಿತಿಯನ್ನ ಸಂಗ್ರಹಿಸಲಾಗುತ್ತದೆ. ಜಿಲ್ಲೆಯ ಸಾರ್ವಜನಿಕರು ಸಮೀಕ್ಷೆಯ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಗಣತಿದಾರರಾದ ವಿರೂಪಾಕ್ಷಪ್ಪ ಬಾಗೋಡಿ, ಮಾಸ್ಟರ್ ಟ್ರೈನರ್ ಶರಣಪ್ಪ ಮಾಗಳದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಬಸವೇಶ್ವರ ನಗರದ ಸಾರ್ವಜನಿಕರು ಉಪಸ್ಥಿತರಿದ್ದರು.

# ವಸತಿ ಕಾಲೇಜುಗಳ ಪ್ರಥಮ ಪಿ.ಯು.ಸಿ ವಿಜ್ಞಾನ ವಿಭಾಗಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ, ಪ.ಪಂಗಡ ಹಾಗೂ ಹಿಂದುಳಿದ ವರ್ಗಗಳ ವಸತಿ ವಿಜ್ಞಾನ ಕಾಲೇಜುಗಳ 2025-26ನೇ ಸಾಲಿನ ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕೊಪ್ಪಳಜಿಲ್ಲೆಯಸಮಾಜಕಲ್ಯಾಣಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರೇಸಿಂದೋಗಿ ಮತ್ತು ಗಂಗಾವತಿ ತಾಲೂಕಿನ ಜಮಾಪುರದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿಗೆ (ಪಿಸಿಎಮ್‌ಬಿ ಮತ್ತು ಪಿಸಿಎಮ್ಸಿಎಸ್) 10 ನೇ ತರಗತಿಯಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಮೆರಿಟ್ ಹಾಗೂ ಸರ್ಕಾರದ ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮವಸ್ತ್ರ, ಪಠ್ಯಪುಸ್ತಕ, ಹಾಗೂ ಇನ್ನಿತರ ಸಾಮಾಗ್ರಿಗಳನ್ನು ನೀಡುವುದರ ಜೊತೆಗೆ ಗುಣಮಟ್ಟದವಿದ್ಯಾಭ್ಯಾಸನೀಡಲಾಗುವುದು. ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅಂದರೆ ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗ, ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರವೇಶ ಲಭ್ಯವಿದೆ. ಪ್ರಸಕ್ತ ಸಾಲಿನ ಪ್ರಥಮ ಪಿಯುಸಿಗೆ80ವಿದ್ಯಾರ್ಥಿಗಳಿಗೆ(ಪಿಸಿಎಮ್‌ಬಿ ಮತ್ತು ಪಿಸಿಎಮ್‌ಸಿ ವಿಭಾಗಕ್ಕೆ) ಪ್ರವೇಶ ನೀಡಲಾಗುತ್ತಿದ್ದು ಶೇ.50 ಸ್ಥಾನಗಳು ವಿದ್ಯಾರ್ಥಿನಿಯರಿಗೆ ಮೀಸಲಾತಿ ನೀಡಲಾಗುತ್ತಿದೆ. ಪ್ರವೇಶ ಬಯಸುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯದ ಮಿತಿ ಪ.ಜಾತಿ ಮತ್ತು ಪ.ವರ್ಗದ ಹಾಗೂ ಹಿಂದುಳಿದ ವರ್ಗದ ಪ್ರವರ್ಗ-1 ರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯದ ರೂ.2.50 ಲಕ್ಷ ಮತ್ತು ಹಿಂದುಳಿದ ವರ್ಗ 2 ಎ, 2ಬಿ, 3ಎ, 3ಬಿ ಗುಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಮಿತಿ ರೂ.1 ಲಕ್ಷ ಮಿತಿಯಲ್ಲಿರಬೇಕು.

ಅರ್ಜಿ ಸಲ್ಲಿಸಲು ಅರ್ಹತೆಗಳು: ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರುವ ಕ್ರೈಸ್‌ನ ಯಾವದೇ ವಸತಿ ಶಾಲೆ, ಸರ್ಕಾರಿ ಅಥವಾ ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ10ನೇತರಗತಿ ಅಧ್ಯಯನ ಮಾಡಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅರ್ಜಿ ಅಲ್ಲಿಸುವ ವಿಧಾನ: ಅಭ್ಯರ್ಥಿಗಳು ಸಂಬಂಧಿಸಿದ ಶಾಲೆಯಿಂದ ಸ್ಯಾಟ್ಸ್ ಸಂಖ್ಯೆಯನ್ನು ಪಡೆದು ಮತ್ತು ಮೀಸಲಾತಿಗೆ ಸಂಬಂಧಿಸಿದಎಲ್ಲಾಮೂಲದಾಖಲಾತಿಗಳ ಸಹಿತತಮಗೆಹತ್ತಿರವಿರುವಕರ್ನಾಟಕವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಯಾವುದೇ ವಸತಿ ಶಾಲೆ ಅಥವಾ ಕಾಲೇಜಿನ ಪ್ರಾಂಶುಪಾಲರ ಮೂಲಕ ಉಚಿತವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ನೇರವಾಗಿ ಯಾವುದಾದರೂ ಸ್ಥಳದಿಂದ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಅರ್ಜಿ ಸಲ್ಲಿಸಲು ಮೇ. 15 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಹತ್ತಿರದವಸತಿಶಾಲೆಯಪ್ರಾಂಶುಪಾಲರನ್ನು ಅಥವಾ ಪ್ರಾಚಾರ್ಯರು ಮತ್ತು ಜಿಲ್ಲಾ ಸಮನ್ವಾಧಿಕಾರಿಗಳಾದ ಶರಣಗೌಡ ಮೋ.ಸಂ 7411999371, ಜಮಾಪುರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿನ ಪ್ರಾಚಾರ್ಯರು ಚನ್ನಪ್ಪ ಕಂಚಿ ದೂ.ಸಂಖ್ಯೆ.9972473957, ದ್ವಿ.ದ.ಸಹಾಯಕರಾದ ಪರಶುರಾಮ.ಬಿ ದೂರವಾಣಿ ಸಂಖ್ಯೆ. 8618285656, ಅಶೋಕ ಪೋಲಿಸ್ ಪಾಟೀಲ್ ಮೋ.ಸಂಖ್ಯೆ.9986586554ಗೆ ಸಂಪರ್ಕಿಸಲು ಕೊಪ್ಪಳ ಜಿಲ್ಲಾ ಸಮನ್ವಯಾಧಿಕಾರಿ (ಕ್ರೈಸ್ ಕಾಲೇಜು ವಿಭಾಗ)ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳಿಗೆ ಸಹಾಯಧನ: ಅರ್ಜಿ ಆಹ್ವಾನ

**ಕೊಪ್ಪಳ :** ಕೊಪ್ಪಳ ಮೀನುಗಾರಿಕೆ ಇಲಾಖೆಯಿಂದ 2024-25ನೇಸಾಲಿನಕೇಂದ್ರಪುರಸ್ಕೃತಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳಾದ ಲವಣಯುಕ್ತ, ಸೌಳು ಅಥವಾ ಜೌಗು ಭೂಮಿಯುಳ್ಳ ಪ್ರದೇಶದಲ್ಲಿ ಕನಿಷ್ಠ 8 ರಿಂದ 10 ತಿಂಗಳವರೆಗೆ ನೀರು ನಿಲ್ಲುವ ಜಮೀನುಗಳಲ್ಲಿ ಹೊಸದಾಗಿ ಮೀನುಕೃಷಿ ನಿರ್ಮಾಣಕ್ಕೆ ಸಹಾಯಧನ, ಹೂಡಿಕೆವೆಚ್ಚಗಳಿಗೆಸಹಾಯಧನ(ಸಾಮಾನ್ಯವರ್ಗದ ಮೀನುಕೃಷಿಕರಿಗೆ) ಮತ್ತು ಹೊಸದಾಗಿ ಮೀನುಮರಿ ಪಾಲನಾ ಕೊಳಗಳ ನಿರ್ಮಾಣಕ್ಕಾಗಿ ಸಹಾಯಧನ (ಪರಿಶಿಷ್ಟ ಪಂಗಡ ವರ್ಗದ ಮೀನುಕೃಷಿಕರಿಗೆ) ನೀಡಲಾಗುತ್ತಿದೆ. ಆಸಕ್ತ ಮೀನುಗಾರರು ಕೊಪ್ಪಳ ಮೀನುಕಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಮೇ 30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9148287937 ಗೆ ಸಂಪರ್ಕಿಸುವಂತೆ ಕೊಪ್ಪಳ ಮೀನುಕಾರಿಕೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವದ ಮಹಾನ್ ದಾರ್ಶನಿಕ ಬಸವಣ್ಣ: ಅರವಿಂದ ಜತ್ತಿ



**ಬೈಲಹೊಂಗಲ:** ಕನ್ನಡ ನಾಡಿನ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರು ವಿಶ್ವದ ಮಹಾನ್ ದಾರ್ಶನಿಕ ಎಂದು ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಹೇಳಿದರು. ಬಸವ ಸಮಿತಿ ಬೆಂಗಳೂರು ಇವರ ವತಿಯಿಂದ ವಿಶ್ವ ಬಸವ ಜಯಂತಿ 2025ರ ನಿಮಿತ್ತ ಪಟ್ಟಣದ ಚೆನ್ನಮ್ಮಾ ಸಮಾಧಿ ರಸ್ತೆಯಲ್ಲಿರುವ ಗಣಾಚಾರಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಮಹಾನ್ ದಾರ್ಶನಿಕ ಬಸವಣ್ಣ ಗ್ರಂಥ ಲೋಕಾರ್ಪಣೆ ಹಾಗೂ ರಾಜ್ಯಮಟ್ಟದ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಕಲ ಜೀವರಾಶಿಗೆ ಲೇಸನ್ನು ಬಯಸಿ, ನುಡಿದಂತೆ ನಡೆದು ತೋರಿಸಿ, ಸಾತ್ವಿಕ ಬದುಕಿನ ಎಲ್ಲ ತತ್ವಗಳನ್ನು ತಿಳಿಸಿ, ವಿಶ್ವಮಾನವತ್ವವನ್ನು ಸಾರಿ ಹೇಳಿದ ಬಸವಣ್ಣನವರು ಎಲ್ಲ ಕವಿಗಳಿಗೆ ಪ್ರೇರಣೆಯಾಗಲಿ ಎಂದು ಅವರು ಅಭಿಪ್ರಾಯಪಟ್ಟರು. ಲೋಕಾನುಭವ ಮತ್ತು ಶಿವಾನುಭವಗಳ ಮಹಾಸಂಗಮವೇ ವಚನ. ಕವಿತೆಗೆ ಭಾವ, ವಚನಕ್ಕೆ ಅನುಭಾವ ಮುಖ್ಯ ಎಂದು ಅವರು ಹೇಳಿದರು. ಎಲ್ಲ ಕಾಲಕ್ಕೂ ಸಲ್ಲುವ, ಹೃದಯಕ್ಕೆ ಮುಟ್ಟುವ ಶ್ರೇಷ್ಠ ಸಾಹಿತ್ಯವನ್ನು ರಚಿಸುವ ಸೃಜನಶೀಲತೆಯನ್ನು ಕವಿಗಳು ಬೆಳೆಸಿಕೊಳ್ಳುವಂತೆ ಅವರು ಕಿವಿಮಾತು ಹೇಳಿದರು. ರಾಜ್ಯಮಟ್ಟದ ಕವಿಗೋಷ್ಠಿಯ ಮುಖ್ಯ ಸಂಯೋಜಕರು, ಬಸವ ಸಮಿತಿಯ ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರಾದ ಮೋಹನ ಬಸನಗೌಡ ಪಾಟೀಲಪಾಸ್ತಾವಿಕವಾಗಿಮಾತನಾಡಿ1964 ರಲ್ಲಿ ಸ್ಥಾಪನೆಯಾದ ಬಸವ ಸಮಿತಿಯು ಬಸವಾದಿ ಶರಣರ ಜೀವನ-ಸಾಧನೆ, ತತ್ವ-ಸಂದೇಶಗಳನ್ನು ಜನಮಾನಸಕ್ಕೆ ತಲುಪಿಸುವ ಮಹತ್ಕಾರ್ಯ ಮಾಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ದೇಶ-ವಿದೇಶದ 50 ಭಾಷೆಗಳಲ್ಲಿ ವಚನಗಳನ್ನು ಅನುವಾದ ಮಾಡುವುದರ ಮೂಲಕ ಕನ್ನಡ ನಾಡಿನ ಹೆಮ್ಮೆಯ ವಚನ ಸಾಹಿತ್ಯದ ಪ್ರಸಾರ ಮಾಡುತ್ತಿರುವುದು ಸಮಿತಿಯ ಹೆಗ್ಗಳಿಕೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬೈಲಹೊಂಗಲ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷರಾದ ಎನ್.ಆರ್.ಠಕ್ಕಾಯಿ ಮಾತನಾಡಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿ ಬಸವಾದಿ ಶರಣರ ಕುರಿತು ಕವನ ವಾಚಿಸಿದ ಕವಿಗಳ ಉತ್ಸಾಹ, ಆಸಕ್ತಿ ಮೆಚ್ಚುವಂತದ್ದು ಎಂದು ಹೇಳಿದರು. ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರವಾಗಿದ್ದು ಉದಯೋನ್ಮುಖ ಕವಿಗಳು ವಚನ ಅಧ್ಯಯನ ಮಾಡುವುದರಿಂದ ನಾವಿನ್ಯಯುತ ಕಾವ್ಯರಚನೆಗೆ ಸ್ಪೂರ್ತಿ ಪಡೆಯಬಹುದು ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭೆಯ ಬೈಲಹೊಂಗಲ ತಾಲೂಕು ಘಟಕದ ಅಧ್ಯಕ್ಷರಾದ ಡಾ. ಎ.ಎನ್. ಬಾಳಿ, ಜಾಗತಿಕ ಲಿಂಗಾಯತ ಮಹಾಸಭಾದ ಬೆಳಗಾವಿ ಜಿಲ್ಲೆ ಮಹಿಳಾ ಘಟಕದ ಅಧ್ಯಕ್ಷರಾದ ಪ್ರೇಮಕ್ಕ ಅಂಗಡಿ, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ವಿದ್ಯಾವಿಷಯತ್ ಸದಸ್ಯರಾದ ಡಾ.ಚಂದ್ರಶೇಖರ ಗಣಾಚಾರಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾದ ಸಂತೋಷ ಕೊಳವಿ, ಜಾಗತಿಕ ಲಿಂಗಾಯತ ಮಹಾಸಭಾದ ಬೈಲಹೊಂಗಲ ನಗರ ಘಟಕ ಅಧ್ಯಕ್ಷರಾದ ಮಹೇಶ ಕೋಟಗಿ, ಕನ್ನಡ ಜನಪದ ಪರಿಷತ್ತಿನ ತಾಲೂಕಾಧ್ಯಕ್ಷರಾದ ಚಂದ್ರಶೇಖರ ರುದ್ರಪ್ಪ ಕೊಪ್ಪದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ರಾಜ್ಯ ವಿವಿಧೆಡೆಯಿಂದ ಆಗಮಿಸಿದ ರಾಜು ಎಂ. ಯಳಮೇಲಿ, ಬಸವರಾಜ ಚೋಳೆನಹಳ್ಳಿ, ಶಂಕರಬಾಯಿ ನಿಂಬಾಳಕರ, ಸುಭಾಷಬಾಬು ಬಸ್ತವಾಡ, ಗೀತಾ ಅಶೋಕ ಶೇರಿ, ಬಿ.ಡಿ.ಎಸ್. ರಾಜಪ್ಪ, ಶೈಲಜಾ ಎಂ. ಕೋರಿಶೆಟ್ಟರ, ಅರುಣಕುಮಾರ ರಾಜಮಾನೆ, ಅಶ್ವಿನಿ ಬಸವರಾಜ ಚಿಪ್ಪಲಕಟ್ಟಿ ಮಹಾಂತೇಶ ಹ ಸೊಪ್ಪಿನವರು, ಸಂದೀಪ ಎಂ.ಪಿ., ಯಶವಂತ ಮೇತಿ, ಶೇಖರಯ್ಯ ಟಿ. ಹೆಚ್. ಎಂ., ಆತ್ಮಾನಂದ ಅ. ಗೆದ್ದಿಕೇರಿ, ಅರುಣ ರೇವಣೆಪ್ಪ, ಬಂಕಾಪುರ, ಬಸಪ್ಪ ಹೊ.ಶೀಗಿಹಳ್ಳಿ, ಆನಂದ ಯಲ್ಲಪ್ಪ ಕೊಂಡಗುರಿ, ಗಂಗವ್ವ ಗು. ಮಠಪತಿ, ಶೀಲಾ ವಿ. ಕೋರಿಮಠ, ಶಿವಾನಂದ ಗು. ಮಠಪತಿ, ಯಂಕಪ್ಪ ಯ. ಅಂಬಿಗೇರ, ಅಕ್ಕಮಹಾದೇವಿ ನಾಡಗೌಡ, ಪ್ರೀತಿ ಪ್ರದೀಪ ತುಳಜಣ್ಣವರ, ಡಾ. ಭವ್ಯ ಅಶೋಕ ಸಂಪಗಾರ, ಮಲ್ಲಿಕಾರ್ಜುನ ಹ. ಕೆರೂಡಿ, ಹೇಮಾ ಮೊರಬ, ಗೌರಾ ಉ. ಹಾಲಭಾವಿ, ಯಶವಂತ ಭರಮಣ್ಣ ಉಚಗಾಂವಕರ, ಮಹಾಂತೇಶ ವೈ ಗೋನಕೊಪ್ಪ, ವಿಜಯಲಕ್ಷ್ಮಿ ಎಂ. ತಿರಕಣ್ಣವರ, ಬಿ.ಬಿ. ಇಟ್ಟಣ್ಣವರ, ನಾಗಯ್ಯ ಈಶ್ವರಯ್ಯ ಹುಲೆಪ್ಪನವರಮಠ, ಬಿ.ಕೆ.ಹೊಂಗಲ, ಚಿನ್ನಪ್ಪಗೌಡ ಮ. ಪಾಟೀಲ, ದಾನಮ್ಮ ವಿ. ಅಂಗಡಿ, ಕೇಶವ ಜಿ., ಮಧುಮತಿ ಈಶ್ವರ ಸಣಕಲ್ಲ, ಶಶಿಕಲಾ ಎಸ್ ಕುಲಕರ್ಣಿ, ಡಾ. ಮಹಾಂತೇಶ ಬಸಪ್ಪ ಹಳಪೇಟಿ, ಭೀಮಸೇನ ಚಿಂಚಲಿ, ನೇಹಾ ಶ್ರೀನಿವಾಸ ಬಡಿಗೇರ, ವೀಣಾ ಮಂಜುನಾಥ, ಲಲಿತಾ ಮಹಾಂತೇಶ ಅರಳಿ, ಮಲ್ಲಪ್ಪ ಈರಪ್ಪ ಚಾಯಪ್ಪಗೋಳ,ಯಲ್ಲಪ್ಪಕಲ್ಲಪ್ಪಕೊಣ್ಣೂರ, ಗೌರಿ ಯಲ್ಲನಗೌಡ ಮೇಳೇದ, ವಿರೂಪಾಕ್ಷಿ ಕಮತೆ, ಬಸವಣ್ಣೆಪ್ಪ ಭೀ. ಕಾದ್ರೊಳ್ಳಿ, ಭೀಮಾ ಶಿವಾನಂದ ಕುರ್ಲಗೇರಿ, ಮಮತಾ ಮಲ್ಲಾಗೌಡ್ರ, ಜ್ಯೋತಿ ಮಾಳಿ, ನಾಗನಗೌಡ ಕಲ್ಲನಗೌಡ ಹಾದಿಮನಿ, ಬಾಳಗೌಡ ಶಂಕರ ದೊಡಬಂಗಿ, ಪುಷ್ಪಲತಾ ಭಾವಿಮನಿ, ವಿಜಯರೂಪಾ ತಂಬಾಕದ, ಸಾಗರ ಚನ್ನಪ್ಪ ಹುನಗುಂದ, ದೀಪಾ ಶಿವಾನಂದ ನರೇಂದ್ರ, ಸುಸ್ಮಿತಾ ರಾಘವೇಂದ್ರ ಮರೇದ, ಪವಿತ್ರಾ ಈರಪ್ಪ ನರೇಂದ್ರ, ವೀರಮ್ಮ ಎಸ್. ಹಿರೇಬಿದರಿ, ಮಧು ಚಂದ್ರಶೇಖರ ಚನ್ನಂಗಿ, ಚಂದ್ರಶೇಖರ ನಿಂ. ಚನ್ನಂಗಿ, ಡಾ.ಮಲ್ಲಿಕಾರ್ಜುನ ಛಬ್ಬಿ, ಸುಧಾ ಕಬ್ಬೂರ, ಸುವರ್ಣಾ ಮಾಳಗಿಮನಿ, ರಾಮಕೃಷ್ಣ ಗೋಖಲೆ, ಅಫ್ರಿನ್ ಮುಸ್ತಫಾ ಮೊಖಾಶಿ, ಮಹಾಂತೇಶ ಬಾಳಿಗಟ್ಟಿ, ರೇಷ್ಮಾ ಕೋಳಿ, ಚೇತನ ಕವಿ-ಕವಯಿತ್ರಿಯರು ಕವನ ವಾಚಿಸಿದರು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸವದತ್ತಿ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಕೋಳಿ ನಿರೂಪಿಸಿದರು. ಚಿಕ್ಕಬೆಳ್ಳಿಕಟ್ಟಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳಾದ ಇಬ್ರಾಹಿಮ್ ಎಮ್. ಮುಲ್ಲಾ ಕಾರ್ಯಕ್ರಮ ನಿರ್ವಹಿಸಿದರು.

# ನಾಗರಾಳ ಸರ್ಕಾರಿ ಪ್ರೌಢಶಾಲೆಗೆ ಶ್ವೇತಾ ತೇಲಿ ಪ್ರಥಮ

**ಮಹಾಲಿಂಗಪುರ :** ಸಮೀಪದ ನಾಗರಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.65 ರಷ್ಟು ಫಲಿತಾಂಶ ಪಡೆದುಕೊಂಡಿದೆ.ಪರೀಕ್ಷೆಗೆಕುಳಿತ94ವಿದ್ಯಾರ್ಥಿಗಳಲ್ಲಿ 61 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಉನ್ನತ ಶ್ರೇಣಿ 16, ಪ್ರಥಮ ಶ್ರೇಣಿ 38, ದ್ವಿತೀಯ ದರ್ಜೆ 10, ಸಾಮಾನ್ಯ ದರ್ಜೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಶ್ವೇತಾ ತೇಲಿ ಶೇ.98.56 (616) ಶಾಲೆಗೆ ಪ್ರಥಮ, ಆನಂದ ಕಂಬಾರ ಶೇ.93.92 (587) ದ್ವಿತಿಯ, ಅಕ್ಷತಾ ಗುರವ ಶೇ.93.28 (583) ತೃತಿಯ ಸ್ಥಾನ, ತೇಜಸ್ವಿನಿ ಪತ್ತಾರ ಶೇ.92.80 (580) ಭಾಗ್ಯಶ್ರೀ ಹಿರೇಮಠ ಶೇ.92.64% (579),

ಅನಿಶಾ ಮಕಾನದಾರ ಶೇ. 90.24 (564) ಅಂಕಗಳನ್ನು ಪಡೆದುಕೊಂಡಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಪ್ರಭಾರಿ ಮುಖ್ಯ ಗುರುಗಳಾದ ನಾಗೇಂದ್ರ ನಾಗ್ವೇಕರ್, ಎಸ್.ಡಿ.ಎಂ.ಸಿ. ಅಧ್ಯಕ್ಷ ವೆಂಕಪ್ಪ ಲದ್ದಿ ಅಭಿನಂದಿಸಿದ್ದಾರೆ.

# ವರ್ಷಾ ಬಾಗೇವಾಡಿ 94.88% ರಷ್ಟು ಫಲಿತಾಂಶ



**ಬನಹಟ್ಟಿ :** ನಗರದ ಎಸ್.ಆರ್.ಎ. ಹೈಸ್ಕೂಲಿನ ವಿದ್ಯಾರ್ಥಿನಿ ವರ್ಷಾ ವಿಜಯ ಬಾಗೇವಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 593 (94.88%) ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ. ಕನ್ನಡದಲ್ಲಿ 124, ಇಂಗ್ಲೀಷ 90 ಹಿಂದಿ 91, ಗಣಿತ 99, ವಿಜ್ಞಾನ 91, ಸಮಾಜ ವಿಜ್ಞಾನ 98 ಅಂಕ ಪಡೆದುಕೊಂಡಿದ್ದಾಳೆ. ಇವಳ ಸಾಧನೆಗೆ ಬನಹಟ್ಟಿಯ ಶಿವಸಿಂಪಿ ಸಮಾಜ ಹಾಗೂ ಸೋಮವಾರ ಪೇಟೆಯ ಸಮಸ್ತ ದೈವ ಮಂಡಳದ ಹಿರಿಯರು ಸಂತಸ ವ್ಯಕ್ತಪಡಿಸಿದ್ದಾರೆ.

# ರನ್ನಬೆಳಗಲಿ ಬಿವಿಎಸ್ ಪ್ರೌಢಶಾಲೆಗೆ ಶೇ.70 ರಷ್ಟು ಫಲಿತಾಂಶ








**ಮಹಾಲಿಂಗಪುರ :** ಸಮೀಪದ ರನ್ನ ಬೆಳಗಲಿಯ ಬಿ.ವಿ.ಎಸ್. ಪ್ರೌಢ ಶಾಲೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 69.80 ಫಲಿತಾಂಶ ಪಡೆದಿದೆ. ರೂಪಾ ಹಳ್ಳೂರ 619 (ಶೇ.99.04) ಪ್ರಥಮ, ಪಲ್ಲವಿ ಭದ್ರಶೆಟ್ಟಿ 615 (ಶೇ.98.04) ದ್ವಿತೀಯ,ಪದ್ಮಾ ಸಣಹಟ್ಟಿ 613 (ಶೇ.98) ತೃತೀಯ ಸ್ಥಾನ ಗಳಿಸಿದ್ದಾರೆ. ಪರೀಕ್ಷೆ ಬರೆದ 159 ವಿದ್ಯಾರ್ಥಿಗಳಲ್ಲಿ 29 ಡಿಸ್ಟಿಂಕ್ಷನ್, 50 ಪ್ರಥಮ ದರ್ಜೆ, 28 ದ್ವಿತೀಯ ದರ್ಜೆ, ಓವ9 ಸಾಮಾನ್ಯ ದರ್ಜೆಯಲ್ಲಿ ಸೇರಿದಂತೆ 111 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಎಸ್. ಬಿ. ರಡ್ಡೆರಟ್ಟಿ. ತಿಳಿಸಿದ್ದಾರೆ.

# 114 ಹಳ್ಳಿ, 140 ಮಂದಿರ ಜೀರ್ಣೋದ್ಧಾರ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್



**ಬೆಳಗಾವಿ :** ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ 114 ಹಳ್ಳಿಗಳಿದ್ದು ಇವುಗಳಲ್ಲಿ 140 ಮಂದಿರಗಳನ್ನು ಕಳೆದ 7 ವರ್ಷದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ ಎಂದು ಕ್ಷೇತ್ರದ ಶಾಸಕರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ.

ತುರಮುರಿ ಗ್ರಾಮದಲ್ಲಿ ಶುಕ್ರವಾರ ನೂತನ ಶ್ರೀ ಜ್ಯೋತಿರ್ಲಿಂಗ ಮಂದಿರದ ವಾಸ್ತುಶಾಂತಿ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸೋಹಳಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಯಾವುದೇ ಜಾತಿ, ಭಾಷೆ, ಧರ್ಮ ಯಾವುದನ್ನೂ ನೋಡದೆ ಎಲ್ಲ ಗ್ರಾಮಗಳಲ್ಲಿ ಜನರ ಬೇಡಿಕೆಯಂತೆ ಮಂದಿರಗಳನ್ನು ನಿರ್ಮಾಣ ಮತ್ತು ಜೀರ್ಣೋದ್ಧಾರ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಜನರ ಪ್ರೀತಿ ಮತ್ತು ಸಹಕಾರದಿಂದಾಗಿ ಕ್ಷೇತ್ರದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಭಿವೃದಧಿ ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಮಾಡುವ ಯೋಜನೆ ಹೊಂದಿದ್ದೇನೆ. ಎಲ್ಲರ ಸಹಕಾರ ಹೀಗೆಯೇ ಮುಂದುವರಿಯಲಿ ಎಂದು ಅವರು ವಿನಂತಿಸಿದರು.

ಕಾರ್ಯಕ್ರಮದಲ್ಲಿ ಯುವರಾಜ ಕದಂ, ಸುಹಾಸ್ ಜಾಧವ್, ಜ್ಞಾನೇಶ್ವರ ಜಾಧವ್, ವೈಶಾಲಿ ಕಾಂಡೇಕರ್, ಬಾಬು ಬೆಳಗಾಂವ್ಕರ್,

ಉಮೇಶ ಜಾಧವ್, ಪ್ರಕಾಶ ಚಲವಟ್ಕರ್, ಯಲ್ಲಪ್ಪ ಜಾಧವ್, ಪುಂಡಲೀಕ್ ಬೆಳಗಾಂವ್ಕರ್, ಮಾಜಿ ಸೈನಿಕರ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪ್ರಥಮ ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

**ಬೆಳಗಾವಿ :** 2025-26ನೇ ಶೈಕ್ಷಣಿಕ ಸಾಲಿಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು/ಇಂಟಿಗ್ರೇಟೆಡ್ (ಉನ್ನತೀಕರಣಗೊಂಡ) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪದವಿ ಪೂರ್ವ ಕಾಲೇಜುಗಳು, ಡಾ: ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ಪದವಿ ಪೂರ್ವ ಕಾಲೇಜುಗಳು ಹಾಗೂ ಉನ್ನತೀಕರಿಸಿದ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಮೇ. 17ರ ಒಳಗಾಗಿ ಸೇವಾ ಸಿಂಧು ಪೋರ್ಟಲ್ http://sevasindhuservices.karnataka.gov.in ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲ ತಾಣ http://dom.karnataka.in ದಲ್ಲಿ ಪಡೆಯಬಹುದಾಗಿದೆ ಹಾಗೂ ತಮ್ಮ ಹತ್ತಿರದ ಮೌಲಾನಾ ಆಜಾದ ಮಾದರಿ ಶಾಲೆಗಳು,

ಅಲ್ಪಸಂಖ್ಯಾತರ ಜಿಲ್ಲಾ/ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿಯೂ ಕೂಡ ಉಚಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೈನುಗಾರಿಕೆ ಲಾಭದಾಯಕ ಉದ್ಯಮ: ಸಿದ್ದು ಸವದಿ



**ಮಹಾಲಿಂಗಪುರ :** ಹೈನುಗಾರಿಕೆಯು ಲಾಭದಾಯಕ ಉದ್ಯಮವಾಗಿರುವುದರಿಂದ ರೈತರು ಹೈನುಗಾರಿಕೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಢವಳೇಶ್ವರ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಆರ್‌ಐಡಿಎಫ್ ಯೋಜನೆಯಡಿಯಲ್ಲಿ ಸುಮಾರು ಐವತ್ತುಲಕ್ಷರೂ.ವೆಚ್ಚದಪಶು ಚಿಕಿತ್ಸಾಲಯದನೂತನ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಢವಳೇಶ್ವರ ಗ್ರಾಮದಲ್ಲಿ ಹೆಚ್ಚಿನ ಹೈನುಗಾರಿಕೆ ಇರುವುದರಿಂದ ಹೈನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡಿ, ರೈತರ ಅನುಕೂಲಕ್ಕಾಗಿ ಪಶು ಚಿಕಿತ್ಸಾಲಯ ನಿರ್ಮಿಸಲಾಗುತ್ತಿದೆ.

ಗ್ರಾಮದಲ್ಲಿ ಪಶು ಚಿಕಿತ್ಸಾಲಯವಿದೆ. ಅದಕ್ಕೆ ಸ್ವಂತ ಕಟ್ಟಡ ಇರಲಿಲ್ಲ. ಈ ಮೂಲಕ ಕಟ್ಟಡದ ಕೊರತೆ ನೀಗಲಿದೆ ಎಂದರು.

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಶಿವಾನಂದ ಕರಡಿಗುಡ್ಡ, ತಾಲ್ಲೂಕಾ ಸಹಾಯಕ ನಿರ್ದೇಶಕ ಬಸವರಾಜ ಗೌಡರ, ಹಿರಿಯ ಪಶುವೈದ್ಯಾಧಿಕಾರಿ ವಿಶಾಲ ಪಾಟೀಲ,

ಢವಳೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷೆ ಪ್ರಭಾವತಿ ಶಿವಾಪೂರ, ಉಪಾಧ್ಯಕ್ಷೆ ಯಲ್ಲವ್ವ ಅಕ್ಕೆನ್ನವರ, ಸದಸ್ಯರಾದ ಲಕ್ಷ್ಮಣ ಪಟ್ಟಣಶೆಟ್ಟಿ, ಗಂಗಾಧರ ಸಂಗನ್ನವರ,ಮೌನೇಶಬಡಿಗೇರ,ಪಿಡಿಒಸಿದ್ರಾಮೇಶ ಕುಂದರಗಿಮಠ,

ಮುಖಂಡರಾದ ಚನ್ನಪ್ಪ ಪಟ್ಟಣಶೆಟ್ಟಿ, ಮಾರುತಿ ಹವಾಲ್ದಾರ, ಮಹಾಲಿಂಗ ಪಟ್ಟಣಶೆಟ್ಟಿ, ಅಶೋಕ ಹವಾಲ್ದಾರ, ದೇವರೇಶ ಉಳ್ಳಾಗಡ್ಡಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

# ಬಾಗಲಕೋಟೆಯಲ್ಲಿ ಕಸಾಪ 111 ನೇ ಸಂಸ್ಥಾಪನಾ ದಿನಾಚರಣೆ





**ಬಾಗಲಕೋಟೆ:** ಕನ್ನಡಿಗರ ಹಿತ ಕಾಪಾಡುವುದು, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ನೆಲ, ಜಲ ಸಂರಕ್ಷಣೆ, ಅವುಗಳ ಬೆಳವಣಿಗೆ, ಕನ್ನಡ ಗ್ರಂಥಗಳನ್ನು ಪ್ರಕಟಿಸುವುದು, ಸಮ್ಮೇಳನಗಳ ಆಯೋಜನೆ, ಕನ್ನಡದ ಬಗ್ಗೆ ಜನಜಾಗೃತಿ ಮೂಡಿಸುವ ಧ್ಯೇಯೋದ್ದೇಶಗಳೊಂದಿಗೆ ಸದಾಕಾಲ ಕಾರ್ಯೋನ್ಮುಖವಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹೆಮ್ಮೆಯ, ಅಭಿಮಾನದ ಸಂಸ್ಥೆಯಾಗಿದೆ ಎಂದು ಬಾಗಲಕೋಟೆ ಶಾಸಕರ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ,ಸಾಹಿತಿ ಸಂಗಮೇಶ ಸಣ್ಣತಂಗಿ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಸಾಪ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕಸಾಪ 111 ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅತಿಥಿ ಉಪನ್ಯಾಸಕರಾಗಿ ಆಗಮಿಸಿ ಅವರು ಮಾತನಾಡಿದರು. ನಾಡು ನುಡಿ ಒಳಿತಿಗಾಗಿ ವೈಶಿಷ್ಟಪೂರ್ಣ ಕಾರ್ಯಕ್ರಮಗಳನ್ನು, ಸಮ್ಮೇಳನಗಳನ್ನು ಆಯೋಜಿಸಿ ಜನಸಾಮಾನ್ಯರು ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯ ಮಾಡುತ್ತಿದೆ. ರಾಜ್ಯ, ಜಿಲ್ಲೆ, ತಾಲೂಕು, ಹೋಬಳಿ ಮಟ್ಟದಲ್ಲಿ ಕಸಾಪ ಘಟಕಗಳಿವೆ. ದೇಶ ವಿದೇಶಗಳಲ್ಲಿಯೂ ಕನ್ನಡಪರ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಹೇಳಿದರು. ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಎನ್. ಬಿ. ಗೊರವರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಕನ್ನಡ ಭಾಷೆ ಬೆಳವಣಿಗೆಗೆ ಕಂಕಣ ಬದ್ಧವಾಗಿ ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸ್ತುತ್ಯ ಕಾರ್ಯವಾಗಿದೆ. ಶಾಲಾ, ಕಾಲೇಜುಗಳಲ್ಲಿಯೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿಕ್ಷಕರು, ಶಾಲಾ ಮಕ್ಕಳು ಕನ್ನಡ ಭಾಷಾಭಿಮಾನ ಬೆಳೆಸಿಕೊಂಡು ಮಾತೃಭಾಷೆಮಹತ್ವಅರಿಯುವಂತೆಕಸಾಪ ಒಳ್ಳೆಯಕಾರ್ಯಮಾಡುತ್ತಿದೆ.ಸಾಧಕರನ್ನು, ಹಿರಿಯ ಸಾಹಿತಿಗಳನ್ನು ಗೌರವಿಸುವುದು. ಕೃತಿಗಳನ್ನು ಪ್ರಕಟಿಸುವುದು ಹೀಗೆ ಜಿಲ್ಲೆಯಲ್ಲಿ ಶೆಲ್ಲಿಕೇರಿಯವರ ನೇತೃತ್ವದಲ್ಲಿ ಕಸಾಪ ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿರುವುದು ಗಮನಾರ್ಹವಾಗಿದೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಜಿಲ್ಲೆಯಲ್ಲಿ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಜಿಲ್ಲಾ ಕಸಾಪ ಮುಂಚೂಣಿಯಲ್ಲಿದೆ. ಅಲಕ್ಷಿತ ಸಾಹಿತಿಗಳಿಗೆ,ಕಲಾವಿದರಿಗೆ ವೇದಿಕೆ ಒದಗಿಸಿಕೊಟ್ಟುಪೂಜ್ಯರ,ಹಿರಿಯರ,ಹಿರಿಯ ಸಾಹಿತಿಗಳ ಮಾರ್ಗದರ್ಶನದೊಂದಿಗೆ ಜಿಲ್ಲಾ ಸಮ್ಮೇಳನಗಳು, ತಾಲ್ಲೂಕಾ ಸಮ್ಮೇಳನಗಳು, ಶಿಕ್ಷಕ–ಸಾಹಿತಿಗಳ ಸಮ್ಮೇಳನ, ವಿಭಾಗ ಮಟ್ಟದ ಸಾಂಸ್ಕೃತಿಕ ಸಮ್ಮೇಳನ ನಡೆದಿವೆ. ವಿಶ್ವವಿದ್ಯಾಲಯಗಳು, ಅಕ್ಯಾಡೆಮಿಗಳ ಸಹಯೋಗದೊಂದಿಗೂ ಹತ್ತು ಹಲವು ಕಾರ್ಯಕ್ರಮಗಳನ್ನು ಜಿಲ್ಲೆಯ ವಿವಿಧೆಡೆ ನಡೆಸಲಾಗಿದೆ.

ಜಿಲ್ಲೆಯಲ್ಲಿ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಜಿಲ್ಲಾ ಕಸಾಪ ಪ್ರಕಟಿಸಿದೆ ಎಂದರು.

ಇದೇ ಸಂದರ್ಭದಲ್ಲಿ ಶಿರೂರಿನ ಹಿರಿಯರು, ಕನ್ನಡ ಪಂಡಿತರಾದ ಎ. ಸಿ. ಚೌಕಿಮಠ, ಮಹಾಲಿಂಗಪುರದ ಹಿರಿಯ ಸಾಹಿತಿ ಗುರುರಾಜ ಖಾಸನೀಸ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಎ. ಸಿ. ಚೌಕಿಮಠ, ಸಾಹಿತಿ ಗುರುರಾಜ ಖಾಸನೀಸ ಮಾತನಾಡಿದರು.

ಸಾಮೂಹಿಕವಾಗಿ ನಾಡಗೀತೆ ನೆರವೇರಿತು. ಕಸಾಪ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಎಸ್. ನಾಗನೂರ ಸ್ವಾಗತಿಸಿದರು. ರಬಕವಿ–ಬನಹಟ್ಟಿ ತಾಲ್ಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಸೊಗಸಾಗಿ ನಿರೂಪಿಸಿದರು. ಪ್ರಿಯಾ ಕಟ್ಟಿ ವಂದಿಸಿದರು. ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಆನಂದ ಹಲಕುರ್ಕಿ, ಆರ್. ಸಿ. ಚಿತ್ತವಾಡಗಿ,

ಜಿಲ್ಲಾ ಕಸಾಪ ಮಹಿಳಾ ಪ್ರತಿನಿಧಿ ಜಯಶ್ರೀ ಮುರನಾಳ, ಪಿ. ಎ. ಚೌಕಿಮಠ ಇನ್ನಿತರರು ಪಾಲ್ಗೊಂಡಿದ್ದರು.

# ರನ್ನಬೆಳಗಲಿ ಬಸವಾ ಪ್ರೌಢಶಾಲೆಗೆ ಉತ್ತಮ ಫಲಿತಾಂಶ



**ಮಹಾಲಿಂಗಪುರ:** ಸಮೀಪದ ರನ್ನಬೆಳಗಲಿಯ ಓಂ ಬಸವಾ ಶಿಕ್ಷಣ ಸಂಸ್ಥೆಯ ಬಸವಾ ಆಂಗ್ಲ ಮಾಧ್ಯಮ ಶಾಲೆ ಮತ್ತು ಕನ್ನಡ ಮಾಧ್ಯಮ ಶಾಲೆಗೆ ಉತ್ತಮ ಫಲಿತಾಂಶ ಬಂದಿದೆ.

ಕನ್ನಡ ಮಾಧ್ಯಮ : ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ. ಉನ್ನತ ಶ್ರೇಣಿ 12, ಪ್ರಥಮ ಶ್ರೇಣಿ 15, ದ್ವಿತೀಯ ದರ್ಜೆ ಓರ್ವ ವಿದ್ಯಾರ್ಥಿ ಸೇರಿದಂತೆ 32 ಜನ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ವಿಷಯವಾರು ಕನ್ನಡ 125 ಕ್ಕೆ 125 ಓರ್ವ ವಿದ್ಯಾರ್ಥಿ, ಹಿಂದಿ ನೂರಕ್ಕೆ ನೂರು ಇಬ್ಬರು ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಅಮೃತಾ ರಾಮಪ್ಪ ನೇಸೂರ 608 (ಶೇ.97.28) ಪ್ರಥಮ, ಸೌಮ್ಯ ಬಸಪ್ಪ ನಿಡಗುಂದಿ 594 (ಶೇ.95.04) ದ್ವಿತೀಯ, ಗಾಯತ್ರಿ ಸಿಮಂತ ಕಾರಜೋಳ 571 (ಶೇ.91.36) ತೃತೀಯ, ಶ್ವೇತಾ ಶ್ರೀಶೈಲ ಡೋಣಿ 565 (ಶೇ.90.04) ಚತುರ್ಥ, ಗಂಗವ್ವ ಗುರುಬಸಪ್ಪ ಕಟ್ಟಿ 564 (ಶೇ.90.24) ಪಂಚಮ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಮುಖ್ಯ ಶಿಕ್ಷಕ ಎಲ್. ಎಂ. ಲೋಕುರಿ ತಿಳಿಸಿದ್ದಾರೆ.

ಆಂಗ್ಲ ಮಾಧ್ಯಮ : 98.08% ರಷ್ಟು ಫಲಿತಾಂಶ ಬಂದಿದೆ. ಉನ್ನತ ಶ್ರೇಣಿ ಏಳು, ಪ್ರಥಮ ದರ್ಜೆಹನ್ನೊಂದುಸೇರಿದಂತೆ ಇಪ್ಪತ್ತೊಂದು ವಿದ್ಯಾರ್ಥಿಗಳು ಪಾಸಾಗಿದ್ದಾರೆ. ವಿಷಯವಾರು ಕನ್ನಡದಲ್ಲಿ ಐದು ಜನ ವಿದ್ಯಾರ್ಥಿಗಳು, ಹಿಂದಿಯಲ್ಲಿ ನಾಲ್ಕು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿದ್ದಾರೆ. ಆದರ್ಶ ಧರೆಪ್ಪ ಚಿನಗುಂಡಿ 618 (ಶೇ.98.88) ಪ್ರಥಮ, ಕಿರಣಕುಮಾರ ಹಣಮಂತ ಮಾಲದಿನ್ನಿ 594 (ಶೇ.95.04) ದ್ವಿತೀಯ, ಸಂಪ್ರೀಯಾ ಪ್ರಕಾಶ ಪಾಲಭಾಂವಿ 589 (ಶೇ.94.24) ತೃತೀಯ, ಸಮರ್ಥ ಆನಂದ ಬಡಿಗೇರ 589 (ಶೇ.94.24) ತೃತೀಯ, ಪ್ರೀತಮ ವಸಂತ ಅಂದಾನಿ 578 (ಶೇ.92.48) ಚತುರ್ಥ, ಅಭಿಷೇಕ ಶ್ರೀಶೈಲ ತೇಲಿ 565 (ಶೇ.90.04%) ಪಂಚಮ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಮುಖ್ಯ ಗುರುಗಳಾದ ಎಸ್. ಕೆ. ಹಿರೇಮಠ ತಿಳಿಸಿದ್ದಾರೆ.

# ಅಧ್ಯಕ್ಷರಾಗಿ ಪ್ರಕಾಶ ಅರಳಿಕಟ್ಟಿ, ಉಪಾಧ್ಯಕ್ಷರಾಗಿ ಪಂಕಿ ಆಯ್ಕೆ



**ಮಹಾಲಿಂಗಪುರ :** ಪಟ್ಟಣದ ಪ್ರಗತಿ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪ್ರಕಾಶ ಮಲ್ಲಪ್ಪ ಅರಳಿಕಟ್ಟಿ, ಉಪಾಧ್ಯಕ್ಷರಾಗಿ ಶಂಕರ ಶ್ರೀಶೈಲ ಪಂಕಿ ಅವಿರೋಧ ಆಯ್ಕೆಯಾದರು.

ಇತ್ತಿಚೆಗೆ ನಡೆದ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಯಲ್ಲಿ ಉಭಯ ಸ್ಥಾನಗಳಿಗೆ ತಲಾ ಒಂದೊಂದು ನಾಮಪತ್ರಗಳು ಸಲ್ಲಿಕೆಯಾದ ಕಾರಣ ಪ್ರಗತಿ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪ್ರಕಾಶ ಮಲ್ಲಪ್ಪ ಅರಳಿಕಟ್ಟಿ, ಉಪಾಧ್ಯಕ್ಷರಾಗಿ ಶಂಕರ ಶ್ರೀಶೈಲ ಪಂಕಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಗಿರಿಗೌಡ ನಂದಿಗೌಡ್ರ ಘೋಷಿಸಿದರು.

ನೂತನಅಧ್ಯಕ್ಷಪ್ರಕಾಶಅರಳಿಕಟ್ಟಿಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಸಂಘದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯವಾಗಿದೆ. ದಕ್ಷ ಮತ್ತು ಪಾರದರ್ಶಕ ಆಡಳಿತದೊಂದಿಗೆ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ನಿದೇ9ಶಕರಾದ ಸಂಗಪ್ಪ ಜಮಖಂಡಿ, ಪ್ರಕಾಶ ಬಿಲಕುಂದಿ, ಶ್ರೀಶೈಲ ಬಿಸನಕೊಪ್ಪ, ಶಿವಪ್ಪ ಮೂಡಲಗಿ, ಚನ್ನಪ್ಪ ಹುಣಶ್ಯಾಳ, ಶೋಭಾ ಕರಡಿ, ಮಹಾದೇವ ಗಲಗಲಿ, ಮಹಾಲಿಂಗಪ್ಪ ಹುಣಶ್ಯಾಳ, ಮಹಾದೇವ ಯಡ್ರಾಂವಿ ನೂತನ ಅಧ್ಯಕ್ಷ–ಉಪಾಧ್ಯಕ್ಷರಿಗೆ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಪ್ರಗತಿ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಸಹಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಶಶಿಕಾಂತ ಜಗದಾಳ ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಶಾಸಕರಿಂದ ಸನ್ಮಾನ



**ಬಾದಾಮಿ :** ಪ್ರಸಕ್ತ 2024–25 ನೇ ಸಾಲಿನ ಎಸ್.ಎಸ್.ಎಲ್.ಸಿ.ಪರೀಕ್ಷೆ–1 ರಲ್ಲಿ ತಾಲೂಕಿಗೆ ಅತಿ ಹೆಚ್ಚು ಅಂಕ ಪಡೆದವಿದ್ಯಾರ್ಥಿಗಳಿಗೆಶಾಸಕಭೀಮಸೇನಚಿಮ್ಮನಕಟ್ಟಿ ಅವರು ಅವರ ಚಾಲುಕ್ಯನಗರದ ನಿವಾಸದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಕಾವ್ಯ ಚಿತ್ರಗಾರ(620), ದ್ವಿತೀಯ ಸ್ಥಾನ ಪಡೆದ ಶ್ವೇತಾ ಮಠಪತಿ(616), ತೃತೀಯ ಸ್ಥಾನ ಪಡೆದ ಯಲ್ಲವ್ವ ಜುಂಜುಗೌಡ(615) ಹಾಗೂ ಸೌಭಾಗ್ಯ ಪಟ್ಟಣದ(615) ಪವನ ಕುಟುಕನಕೇರಿ ಇವರಿಗೆ ಶಾಲು ಹೊದಿಸಿ ಸನ್ಮಾನಿಸಿದರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿ ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಪಾಲಕರ ಸಹಾಯವನ್ನು ಸ್ಮರಿಸಿದರು. ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡರ, ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ, ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್. ಹಳಗೇರಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಉಜ್ವಲ ಬಸರಿ ಸೇರಿದಂತೆ ತಾಲೂಕಿನ ಶಿಕ್ಷಕರು, ಪಾಲಕರು ಹಾಜರಿದ್ದರು.

ಶಿಕ್ಷಣ ಸಂಯೋಜಕ ಬಿ.ಕೆ.ಚಿಮಲ್ ಮಾತನಾಡಿ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಜಿಲ್ಲೆಗೆ ಎರಡನೇ ಸ್ಥಾನ ಪಡೆದ ಬಾದಾಮಿ ತಾಲೂಕಿನ ಸಾಧನೆ ಬಗ್ಗೆ ಮಾತನಾಡಿದರು.

# ವಿದ್ಯಾವಿಜಯ ಪ್ರೌಢಶಾಲೆಗೆ ಎಸ್.ಎಸ್.ಎಲ್.ಸಿ.ಯಲ್ಲಿ ಶೇ85 ರಷ್ಟು ಫಲಿತಾಂಶ

**ಬಾದಾಮಿ :** ಪಟ್ಟಣದ ವಿದ್ಯಾ ವಿಜಯ ಪ್ರಾಥಮಿಕ/ಪ್ರೌಢ ಶಾಲೆಯ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತೋರುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

2024–25 ನೇ ಸಾಲಿನ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆ–1 ರಲ್ಲಿ ಶೇ.85% ರಷ್ಟು ಫಲಿತಾಂಶ ಬಂದಿದ್ದು, ಶಾಲೆಗೆ ಕುಮಾರಿ ಪ್ರೀಯದರ್ಶಿನಿ ಕೆ.ಆರ್ ಇಂಗ್ಲೀಷ 100 ಕ್ಕೆ 100ರಷ್ಟು ಶೇ. 93.28% ಅಂಕ ಪಡೆದು ಪ್ರಥಮ ಸ್ಥಾನ, ಮಂಜುನಾಥ ನಾ.ಚಲವಾದಿ ಶೇ 86.24% ಅಂಕ ಪಡೆದು ದ್ವಿತಿಯ ಸ್ಥಾನ ಹಾಗೂ ವಿಜಯಕುಮಾರ ರಾಯ್ಕರ ಶೇ84% ಅಂಕ ಪಡೆದು ತೃತೀಯಸ್ಥಾನ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಮುಖ್ಯಶಿಕ್ಷಕಿ ಎನ್.ವಿ.ಪೋತದಾರ ತಿಳಿಸಿದ್ದಾರೆ.

ಅಭಿನಂದನೆ;ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ವ್ಹಿ ಬಡಿಗೇರ, ಕಾರ್ಯದರ್ಶಿ ನಾರಾಯಣ ವ್ಹಿ ಬಡಿಗೇರ ಹಾಗೂ ಶಾಲೆ ಮುಖ್ಯಗುರುಮಾತೆ ಎನ್.ವ್ಹಿ.ಪೋತದಾರ ಮತ್ತು ಸಹಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

# ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

**ಬಾದಾಮಿ :** ನಿಸರ್ಗ ಪ್ರಕಾಶನ ಲಕ್ಕಸಕೊಪ್ಪ ಇವರ ವತಿಯಿಂಧ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

"ಜನಪದರ ದೃಷ್ಟಿಯಲ್ಲಿ ಮಳೆ ಮತ್ತು ಮಳೆಗಾಲ" ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆದುಕಳುಹಿಸಬಹುದು. ಕಾಲೇಜು ವಿಭಾಗ ಮತ್ತು ಆಸಕ್ತ ಬರಹಗಾರರು ಎರಡು ವಿಭಾಗದಲ್ಲಿ ಪ್ರಬಂಧವನ್ನು ಬರೆದು ಕಳುಹಿಸಬಹುದು. ಪುಟದ ಮಿತಿ ಇರುವುದಿಲ್ಲ. ಪ್ರವೇಶ ಫೀ ಇರುವುದಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪುಸ್ತಕದ ರೂಪದಲ್ಲಿ ಬಹುಮಾನ ನೀಡಲಾಗುವುದು. ಪ್ರಬಂಧವನ್ನು ಜೂನ್ 30 ರೊಳಗೆ "ಪಿ.ಡಿ.ವಾಲೀಕಾರ, ಸಾಹಿತಿಗಳು ಸಾ:ಲಕ್ಕಸಕೊಪ್ಪ ತಾ:ಗುಳೇದಗುಡ್ಡ ಜಿ:ಬಾಗಲಕೋಟೆ587205 ಮೊ:8105459611" ಇಲ್ಲಿಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ಬೆಳವಲಕೊಪ್ಪ ಸರಕಾರಿ ಪ್ರೌಢ ಶಾಲೆಯ ಎಸ್ ಎಸ್ ಎಲ್ ಸಿ ಸಾಧಕರಿಗೆ ಸನ್ಮಾನ



**ಬಾದಾಮಿ :** ತಾಲೂಕಿನ ಬೆಳವಲಕೊಪ್ಪ ಗ್ರಾಮದ ಸರಕಾರಿ ಫ್ರೌಡ ಶಾಲೆಗೆ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ.ಪರೀಕ್ಷೆ–1 ರಲ್ಲಿ ಪ್ರಥಮ ಸ್ಥಾನ ಪಡೆದ ಅಪೂರ್ವ ಅಬ್ಬಿಗೇರಿ (596) ದ್ವಿತೀಯ ಸ್ಥಾನ ಪಡೆದ ವೈಷ್ಣವಿ ಬಂಕನೇರಿಮಠ (567)ಹಾಗೂ ಪ್ರಿಯಾಂಕಾ ಕುಟಕನಕೇರಿ (567) ತೃತೀಯ ಸ್ಥಾನ ಪಡೆದ ಉಮೇಶ್ ಕರಿಗಾರ (550) ಹಾಗೂ ಹಿಂದಿ ವಿಷಯದಲ್ಲಿ ನಂದಿನಿ ಗೌಡರ, ಉಮೇಶ ಕರಿಗಾರ 100 ಕ್ಕೆ 100 ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಶಾಲೆಯ ವತಿಯಿಂದ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಎಸ್.ಎಂ.ಕಾಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಶಿಕ್ಷಕರಾದ ವೈ. ವೈ.ಹಾವರಗಿ, ಕಿಶೋರಕುಮಾರ, ಸಹಶಿಕ್ಷಕಿಯಾದ ಎಸ್.ಐ. ಗೋಡಿನಾಳ ಹಾಗೂ ಕುಂದಗೋಳ, ಎಸ್.ಡಿ.ಎಂ.ಸಿ.ಉಪಾಧ್ಯಕ್ಷ ವಾಸುರಾಜ ಭಾವಿ, ಸದಸ್ಯ ದ್ಯಾಮಣ್ಣ ಅನವಾಲ ಸೇರಿದಂತೆ ಪಾಲಕರು ಹಾಜರಿದ್ದರು.

# ನೂತನ ಅಂಬುಲೆನ್ಸ್ ಸೇವೆಗೆ ಶಾಸಕ ಚಿಮ್ಮನಕಟ್ಟಿ ಚಾಲನೆ



**ಬಾದಾಮಿ :** ತಾಲೂಕ ಆರೋಗ್ಯ ಇಲಾಖೆಗೆ ಕೊಟಲ್ ಮಹಿಂದ್ರಾ ಬ್ಯಾಂಕಿನವರು ಬಾದಾಮಿ ತಾಲೂಕಿಗೆ ದೇಣಿಗೆ ಕೊಡಮಾಡಿದ ಅಂಬುಲೆನ್ಸ್‌ನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಚಾಲನೆಯನ್ನು ನೀಡಿದರು, ಈ ಸಂದರ್ಭದಲ್ಲಿ ವಿಜಯಪುರ ಹಾಗೂ ಬಾಗಲಕೋಟೆ ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡ್ರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಬಾದಾಮಿ ಪುರಸಭೆ ಅಧ್ಯಕ್ಷ ಪಾಂಡು ಕಟ್ಟಿಮನಿ, ಗ್ರಾಮ ಪಂಚಾಯತಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು, ಹಾಗೂ ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಾಲೂಕ ದಂಡಾಧಿಕಾರಿ ಮಧುರಾಜ್, ಡಿ.ಎಚ್.ಓ.ಮಂಜುನಾಥ, ತಾಲೂಕ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ, ತಾಲೂಕಾಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ವಿ.ಕೆ.ಶೆಟ್ಟರ, ಡಾ.ವಾಸುದೇವರಾವ್, ಡಾ.ಕುಸುಮಾ ಮಾಗಿ, ಕೊಟಕ್ ಮಹಿಂದ್ರಾ ಬ್ಯಾಂಕಿನ ಅಧಿಕಾರಿಗಳು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ಎಚ್.ಮಹಾಲಿಂಗಪೂರ ಸೇರಿದಂತೆ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಇತರರು ಉಪಸ್ಥಿತರಿದ್ದರು. ಪಿ.ಎಚ್. ಮಹಾಲಿಂಗಪೂರ ಸ್ವಾಗತಿಸಿದರು. ಸದಾಶಿವ ಮರಡಿ ನಿರೂಪಿಸಿದರು. ಎಲ್.ಎಚ್.ಗೋಪಾಲಗೌಡರ ವಂದಿಸಿದರು.

# ವಿವಿದ ಕಾಮಗಾರಿಗಳಿಗೆ ಶಾಸಕ ಚಿಮ್ಮನಕಟ್ಟಿ ಭೂಮಿಪೂಜೆ



**ಬಾದಾಮಿ :** ತಾಲೂಕಿನ ಯರಗೊಪ್ಪ ಎಸ್.ಬಿ. ಗ್ರಾಮದಲ್ಲಿ ಮುಖ್ಯಮಂತ್ರಿಗಳ ಅನುದಾನದಲ್ಲಿ ರೂ. 30 ಲಕ್ಷ ವೆಚ್ಚದಲ್ಲಿ ಮೂರು ಸಮುದಾಯ ಭವನ ಹಾಗೂ ಸಿ.ಸಿ.ರಸ್ತೆ ಕಾಮಗಾರಿಗೆ ಸೋಮವಾರ ಶಾಸಕ ಭೀಮಸೇನ ಚಿಮ್ಮನಕಟ್ಟಿ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯರು, ಹಿರಿಯರು, ಯುವಕರು, ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

# ಗ್ರಾಮದೇವತೆಗೆ ಉಡಿ ತುಂಬಿದ ಭಕ್ತರು

**ಬಾದಾಮಿ:** ಕೊನೆಯ ವಾರ ಹಿಡಿದ ಕಾರಣ ಮಂಗಳವಾರ ಜನರು, ಭಕ್ತರು ಪಟ್ಟಣದ ಗ್ರಾಮದೇವತೆಗೆ ಉಡಿ ತುಂಬಿದರು. ಬರುವ ದಿನಮಾನಗಳಲ್ಲಿ ಉತ್ತಮ ಮಳೆ, ಬೆಳೆಯಾಗಲಿ ಒಳ್ಳೆಯದಾಗಲಿ ಎಂದು ದೇವರಿಗೆ ಉಡಿ ತುಂಬಿ ಭಕ್ತಿಯ ಸಮರ್ಪಣೆ ಮಾಡಿದರು.

# ಒಳಮೀಸಲಾತಿ ಸಮೀಕ್ಷೆ; ಸಮಗಾರ ಸಮಾಜದ ಮನೆ ಮನೆಗೆ ಭಿತ್ತಿ ಪತ್ರ ವಿತರಣೆ



**ಬಾದಾಮಿ :** ಸರಕಾರ ಒಳಮೀಸಲಾತಿ ಜಾರಿಗೆ ತರಲು ಮೇ 5 ರಿಂದ 17 ರ ವರೆಗೆ ಪರಿಶಿಷ್ಟ ಜಾತಿಗಳ ಸಮೀಕ್ಷೆ ಕಾರ್ಯ ಕೈಕೊಂಡಿದ್ದು, ಪ್ರತಿ ಮನೆಗೆ ಗಣತಿದಾರರು ಬರಲಿದ್ದು, ಆ ಸಮಯದಲ್ಲಿ ಸಮಗಾರ ಸಮಾಜದ ಎಲ್ಲಾ ಬಾಂಧವರು ಕಾಲಂ ನಂಬರ್ 93. ಜಾತಿ ಸಮಗಾರ ಎಂದು ಸ್ಪಷ್ಟವಾಗಿ ಬರೆಸಬೇಕೆಂದು ಸಮಾಜದ ಅಧ್ಯಕ್ಷ ನಾಗರಾಜ ಹ ಹೊಸಮನಿ ಮನೆಗೆ ಭಿತ್ತಿ ಪತ್ರ ವಿತರಣೆ ಮಾಡಿ ಸಮಾಜ ಬಾಂಧವರಿಗೆ ಮಾಹಿತಿ ನೀಡಿದರು. ನಂತರ ಮಾತನಾಡಿದ ಅವರು ಸಮಾಜದ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ, ಮತ್ತು ಸಮಗಾರ ಸಮಾಜದ ನಿಖರವಾದ ಅಂಕಿ ಸಂಖ್ಯೆಗಳು ಇದರಿಂದ ಹೊರಬರಲು ಸಾಧ್ಯ. ಆದ್ದರಿಂದ ಸಮಾಜ ಬಾಂಧವರು ಗಣತಿದಾರರಿಗೆ ಸರಿಯಾದ ಮಾಹಿತಿ ನೀಡುವಂತೆ ಮನವಿ ಮಾಡಿದರು. ಮುಖಂಡ ಮಲಕಾಜಪ್ಪ ಚಂದಾವರಿ ಮಾತನಾಡಿದರು.

ಈಸಂದರ್ಭದಲ್ಲಿಸಮಾಜದಪ್ರಮುಖರಾದರವೀಂದ್ರ ಮುಂಡೇವಾಡಿ, ವಿಜಯ ದೊಡಮನಿ, ರಮೇಶ ದೊಡಮನಿ, ಶ್ರೀಕಾಂತ ಸಾನಕ್ಯಾನವರ, ಅಜಯ ದೊಡಮನಿ ಮೊದಲಾದವರು ಉಪಸ್ಥಿತರಿದ್ದರು.

# ಒಳ ಮೀಸಲಾತಿ ಜಾರಿಗೊಳಿಸುವ ದಿನಾಂಕ ಕೂಡಲೆ ಘೋಷಿಸಿ: ಕಾರಜೋಳ



**ವಿಜಯಪುರ :** ಮುಖ್ಯಮಂತ್ರಿ ಸಿದ್ಧರಾಮಯ್ಯ ಕೂಡಲೇ ಒಳ ಮೀಸಲಾತಿ ಜಾರಿ ಮಾಡುವ ದಿನಾಂಕವನ್ನು ಘೋಷಿಸುವ ಮೂಲಕ ತಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕು ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಒಳಮೀಸಲಾತಿ ವಿಷಯವಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಸ್ಪಷ್ಟವಾದ ನಿಲುವು ವ್ಯಕ್ತಪಡಿಸಿಕೂಡಲೇಒಳಮೀಸಲಾತಿಜಾರಿಗೊಳಿಸುವ ದಿನಾಂಕವನ್ನು ಘೋಷಣೆ ಮಾಡಬೇಕಾಗಿರುವುದು ಅತ್ಯಂತ ಅಗತ್ಯವಾಗಿದೆ.

ಕಾಂತರಾಜ್ ವರದಿ ಬಗ್ಗೆ ಡಾ.ಮಹಾದೇವಪ್ಪ, ಡಾ.ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ ಧ್ವಂಧ್ವ ನಿಲುವು ತಳೆದಿದ್ದಾರೆ. ಅದನ್ನು ವಿರೋಧಿಸುತ್ತಲೂ ಇಲ್ಲ, ಸಮರ್ಥನೆ ಮಾಡುತ್ತಲೂ ಇಲ್ಲ, ನಂತರದ ದಿನಗಳಲ್ಲಿ ನ್ಯಾ. ನಾಗಮೋಹನ್ ದಾಸ್ ನೇತೃತ್ವಧ ಸರ್ವೇಕ್ಷಣೆಯ ದತ್ತಾಂಶಗಳ ಸರ್ವೇಕ್ಷಣೆ ಬಗ್ಗೆಯೂ ಈನಾಯಕರುಧ್ವಂಧ್ವನಿಲುವುತಾಳುವಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರೇ ಒಳಮೀಸಲಾತಿ ಜಾರಿಗೆ ಬದ್ಧತೆ ಪ್ರದರ್ಶಿಸಬೇಕಿದೆ ಎಂದು ತಿಳಿಸಿದ್ದಾರೆ.

ಕಳೆದ ಆ.1ರಂದೇ ಸುಪ್ರೀಂಕೋರ್ಟ್ ಒಳ ಮೀಸಲಾತಿ ಜಾರಿ ಮಾಡಲು ಅಯಾ ರಾಜ್ಯಗಳಿಗೆ ಅಧಿಕಾರ ನೀಡಿದೆ. 30 ವರ್ಷಗಳಿಂದ ನೆನಗುದಿಗೆ ಬಿದ್ದ ಒಳಮೀಸಲಾತಿ ಅವಶ್ಯಕತೆಯನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಕೇಂದ್ರದ ನರೇಂದ್ರ ಮೋದಿಜಿ ನೇತೃತ್ವದ ಸರ್ಕಾರ ಯಶಸ್ವಿಯೂ ಆಗಿದೆ.

ತೆಲಂಗಾಣ, ಹರ್ಯಾಣಾ, ಆಂಧ್ರ ಪ್ರದೇಶ ಸರ್ಕಾರಗಳು ಈಗಾಗಲೇ ಒಳಮೀಸಲಾತಿ ಜಾರಿಗೊಳಿಸಿವೆ. ಆದರೆ ಸಾಮಾಜಿಕ ನ್ಯಾಯದ ಹರಿಕಾರ ಎಂದು ಬಿಂಬಿಸಿಕೊಳ್ಳುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕರ್ನಾಟಕದಲ್ಲಿ ಒಳಮೀಸಲಾತಿ ಜಾರಿಗೊಳಿಸಿಲ್ಲ, ಈ ನಡೆ ಉಳಿದ ರಾಜ್ಯಗಳ ಎದುರು ತಲೆ ತಗ್ಗಿಸುವಂತೆ ಮಾಡಿದೆ, ಇನ್ನೊಂದೆಡೆ ರಾಜ್ಯ ಸರ್ಕಾರ ಒಳಮೀಸಲಾತಿ ಹೋರಾಟವನ್ನು ದಮನಗೊಳಿಸುವ ವ್ಯವಸ್ಥಿತ ಪ್ರಯತ್ನ ಮಾಡುತ್ತಿದೆ ಎಂದು ಕಾರಜೋಳ ದೂರಿದ್ದಾರೆ.

ಒಳಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ಸರ್ವೇಕ್ಷಣ ಕಾರ್ಯಆರಂಭಗೊಂಡಿದೆ.ಈಹಿನ್ನೆಲೆಯಲ್ಲಿಪರಿಶಿಷ್ಟ ಜಾತಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಕಾರ್ಯವನ್ನು ಸರ್ಕಾರ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಒಳಮೀಸಲಾತಿ ಜಾರಿಗೊಳಿಸುವ ದಿನಾಂಕವನ್ನು ಮುಖ್ಯಮಂತ್ರಿಗಳು ಘೋಷಣೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಸರ್ವೇಕ್ಷಣಾ ಕಾರ್ಯಕ್ಕೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡುತ್ತಿರುವುದರಿಂದ ಕೆಲವೇ ದಿನಗಳಲ್ಲಿ ವರದಿ ಸಿದ್ಧವಾಗುತ್ತದೆ. ಹೀಗಾಗಿ ಕೂಡಲೇ ಒಳಮೀಸಲಾತಿ ಜಾರಿಗೊಳಿಸುವ ದಿನಾಂಕವನ್ನು ತ್ವರಿತಗತಿಯಲ್ಲಿ ಘೋಷಣೆ ಮಾಡುವಂತೆ ಉಮೇಶ ಕಾರಜೋಳ ಒತ್ತಾಯಿಸಿದ್ದಾರೆ.

# ಮುತ್ತಗಿ ಕ್ಷೇತ್ರದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವರ ಉತ್ಸವ

**ವಿಜಯಪುರ :** ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಮುತ್ತಗಿ ಕ್ಷೇತ್ರದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವರ ಉತ್ಸವವವು ಎಪ್ರೀಲ್ 28 ರಿಂದ ಮೇ 13ರ ವರೆಗೆ ಜರುಗುತ್ತದೆ ಎಂದು ಮುತ್ತಗಿ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಚಾರಿಟೇಬಲ್ ಟ್ರಸ್ಟ್ ನ ಅಧ್ಯಕ್ಷ ಹಾಗೂ ಅರ್ಚಕರು ತಿಳಿಸಿದ್ದಾರೆ.

ಪ್ರತಿ ವರ್ಷದಂತೆ ಈ ವರ್ಷವೂ 28-04-2025 ರಿಂದ 13-05-2025ರವರೆಗೆ ಶ್ರೀ ಮದುತ್ತರಾದಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಪ್ರಮೋದತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಹಾಗೂ ಸಮಸ್ತ ಗುರುಗಳ, ದಾಸವರೇಣ್ಯರ ಪರಮಾನುಗ್ರಹದಿಂದ ಶ್ರೀ ಲಕ್ಷ್ಮಿ ?ಮೀನರಸಿಂಹ ದೇವರ ಉತ್ಸವ ಜರುಗುತ್ತದೆ.

ಪ್ರತಿದಿನ ಬೆಳಗ್ಗೆ ನಿರ್ಮಾಲ್ಯ ವಿಸರ್ಜನೆ, ಪಂಚಾಮೃತ ಮಹಾಪೂಜೆ, ಷೋಡಷೋಪಚಾರ ಮಹಾಪೂಜೆ, ನೈವೇದ್ಯ,ಹಸ್ತೋದಕ,ತೀರ್ಥ ಪ್ರಸಾದ,ಸಾಯಂಕಾಲ ಮಂತ್ರಪುಷ್ಪ ಅಷ್ಠಾವಧಾನ ಸೇವೆ, ಪಲ್ಲಕ್ಕಿ ಸೇವೆ, ತೊಟ್ಟಿಲು ಸೇವೆ, ಭಜನೆ ನಡೆಯುತ್ತದೆ.

ಮೇ 10ರಂದು ಶ್ರೀಹರಿಗೆ ಕನಕಾಭಿಷೇಕ, ಸಹಸ್ರ ಶಂಖ ಕ್ಷೀರಾಭಿಷೇಕ, ತುಲಾಭಾರ, ಹೋಮ, ಹವನಾದಿಗಳು ಜರುಗುತ್ತವೆ. 12ರಂದು ರಥಾಂಗ ಹೋಮ ಪ್ರಧಾನ ರಥೋತ್ಸವ ಜರುಗುವುದು. 13ರಂದು ಬೆಳಗ್ಗೆ ಹೋಮಹವನ, ಲಲಿತಾ, ಉತ್ಸವ ನಡೆಸಿಕೊಂಡು ಬಂದ ಮಹನೀಯರಿಗೆ ಆಭಾರ ಮನ್ನಣೆ, ಶೇಷವಸ್ತ್ರ ಸಮರ್ಪಣೆ, ದಾನಿಗಳಿಗೆ ಆಭಾರ ಮನ್ನಣೆ, ಪಂಡಿತರಿಗೆ ಸನ್ಮಾನ, ಗೋಪಾಲಕಾವಲಿ, ಅವಕೃತ ಸ್ನಾನ,ವೇದ ಘೋಷದೊಂದಿಗೆ ಶ್ರೀ ನರಸಿಂಹದೇವರ ಪುರ ಪ್ರವೇಶದೊಂದಿಗೆ ಉತ್ಸವ ಸಮಾಪ್ತಿಗೊಳ್ಳಲಿದೆ ಎಂದು ಅರ್ಚಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎದೆ ಸೀಳಿಕೊಂಡು ಸಾಯುತ್ತೇನೆ ಅಂದಿದ್ದ ಅಂಬೇಡ್ಕರ್: ಬಸವರಾಜ ಜಾಲವಾದಿ



**ಕೊಲ್ಹಾರ:** ನಿಮ್ನಜಾತಿಗಳುತಮ್ಮಗುರಿಯನ್ನು ಸಾಧಿಸುವಂತೆ ಮಾಡಲಾಗದಿದ್ದಲ್ಲಿ. ಈ ದೇಶದಲ್ಲಿ ಮನುಷ್ಯ ಮಾತ್ರರಾಗಿ ಪರಿಗಣಿಸಲ್ಪಡುವಂತೆ ಮಾಡಲಾಗದಿದ್ದಲ್ಲಿ. ಸಾಮಾಜಿಕ ಮರ್ಯಾದೆಗನುಗುಣವಾಗಿ ಅವರ ಜೀವನ ವಿಕಸಿಸುವಂತೆ ಮಾಡಲಾಗದಿದ್ದಲ್ಲಿ.ನಾನು ತುಪಾಕಿಯಿಂದ ನನ್ನ ಎದೆ ಸೀಳಿಕೊಂಡು ಸಾಯುತ್ತೇನೆ..!! ಎಂದ ಅಂಬೇಡ್ಕರರ ಛಲ ಹಿಂದುಳಿದ ಸಮುದಾಯಗಳಿಗೆ ಬರಬೇಕು ಎಂದು ರಾಷ್ಟ್ರೀಯ ಬಸವಚೇತನ ಪ್ರಶಸ್ತಿ ವಿಜೇತ ಪೊ?ರ; ಬಸವರಾಜ ಜಾಲವಾದಿ ಹೇಳಿದರು.

ಅವರು ತಾಳಿಕೋಟೆ ತಾಲೂಕಿನ ತುಂಬಿಗಿ ಗ್ರಾಮದಲ್ಲಿ ನಡೆದ 134 ನೇ ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಮಾತನಾಡುತ್ತಿದ್ದರು ಮುಂದುವರಿದ ಮಾತನಾಡಿದ ಅವರು ಮೇಲ್ಜಾತಿಯ ಹೆಚ್ಚಿನವರಿಗೆ ಶತಶತಮಾನಗಳಿಂದ ಬಂದ ಅಸ್ಪೃಶ್ಯತೆಗೆ ಮೌನ ಸಮ್ಮತಿ ನೀಡುವುದರಲ್ಲಿ ಹೆಚ್ಚಿನ ಸುರಕ್ಷತೆ ಇದೆಯೇ ವಿನಃ ಅದರ ವಿರುದ್ಧ ಈಜುವುದರಲ್ಲಿ ಇಲ್ಲ.

ಗಾಂಧೀಜಿಅಸ್ಪೃಶ್ಯತೆಯವಿರುದ್ಧವಾಗಿಯೂ ಮೇಲ್ಜಾತಿಯವರು ಮಾಡಿದ ಅಪರಾಧಗಳ ಬಗ್ಗೆಯೂ ಮಾತನಾಡಲು ಶುರು ಮಾಡಿ ಅವರಲ್ಲೆಲ್ಲ ಪಾಪಪ್ರಜ್ಞೆ ಹುಟ್ಟಿಸುವ ಕಾಲಕ್ಕೆ ಇದು ಇನ್ನೂ ಹೆಚ್ಚಿನ ಕಷ್ಟದ್ದಾಗಿತ್ತು ಎಂದು ಅಂಬೇಡ್ಕರರೇ ಹೇಳಿದ್ದರು ಒದು ನಿಜವಾಗಿದೆಯೇನೋ ಎಂಬಂತೆ ಭಾಸವಾಗುತ್ತದೆ ಎಂದರು.

ಯಾವುದೇ ಒಂದು ಸಮುದಾಯ ಸಂಕಷ್ಟದಲ್ಲಿರುವಾಗ ಆ ಸಮುದಾಯದ ಯುವಜನರ ಮುಖದ ಮೇಲೆ ನಗೆ ಕಲೆ ಇರುವುದು ತರವಲ್ಲ ಹೀಗಾಗಿ ಕಳಸಮುದಾಯದ ಯುವಕರು ಸಾಮಾಜಿಕ ಸ್ವಾತಂತ್ರ್ಯವನ್ನು ಎಲ್ಲಿಯವರೆಗೆ ಸಾಧಿಸಲಾಗುವುದಿಲ್ಲವೋ ಅಲ್ಲಿಯವರೆಗೂ ಕಾನೂನು ಮೂಲಕ ಒದಗಿಸಲಾದ ಯಾವುದೇ ಸ್ವಾತಂತ್ರ್ಯವೂ ನಿಮಗೆ ದೊರಕುವುದಿಲ್ಲ ಎಂದು ಹೇಳಿದರು.

ಉಪನ್ಯಾಸ ನೀಡಿ ತಾಳಿಕೋಟೆ ಎಸ್. ಕೆ. ಕಾಲೇಜಿನ ಡಾ// ಸುಜಾತಾ ಚಲವಾದಿ ಮಾತನಾಡಿ ಬಾಬಾ ಸಾಹೇಬರು ಕೊಡ ಮಾಡಿದ ಕಾನೂನಾತ್ಮಕ ಕಾರ್ಯತಂತ್ರಗಳಿಂದ, ಆರ್ಥಿಕ ಕಾರ್ಯತಂತ್ರ ಗಳಿಂದ, ಸಾಮಾಜಿಕ ಕಾರ್ಯತಂತ್ರಗಳಿಂದ ಈ ನೆಲದ ಮೇಲೆ ಮಹಿಳೆಯರು ಹೆಮ್ಮೆಯಿಂದ ಬದುಕುತ್ತಿದ್ದೇವೆ ಇದನ್ನು ಮನಗಂಡು ಪುರುಷರಿಗೆ ಸರಿ ಸಮಾನವಾಗಿ ಅಂಬೇಡ್ಕರ್ ರ ವಿಚಾರಧಾರೆಗಳನ್ನು ಪ್ರತಿ ಮನೆಗೂ ತಲುಪಿಸುವ ಕಾರ್ಯವನ್ನು ಹಿಂದುಳಿದ ವರ್ಗದ ಮಹಿಳೆಯರು ಮಾಡಬೇಕಾಗಿದೆ ಎಂದರು.

ನಾಲ್ಕು ಗೋಡೆ ಮಧ್ಯೆ ಬದುಕುವುದನ್ನು ಬಿಟ್ಟು ಸಮಾಜಮುಖಿ ಬದುಕನ್ನ ಅಳವಡಿಸಿಕೊಂಡು ತಲೆ ಎತ್ತಿ ಘನತೆಯಿಂದ ಬದುಕುವಂತೆ ಮಾಡಿದ್ದು ಅಂಬೇಡ್ಕರ್ ಅವರ ಸಂವಿಧಾನವೆ ಹೊರತು ಇನ್ನಾವ ಶಾಸ್ತ್ರವೂ ಅಲ್ಲ. ಗೊಡ್ಡು ಪುರಾಣಗಳೂ ಅಲ್ಲ ಎಂದು ಹೇಳಿದರು.

ಚಂದ್ರಕಾಂತ ಸಿಂಗೆ ಮಾತನಾಡಿ ಜನ ಪ್ರತಿನಿಧಿಗಳು ರಾಷ್ಟ್ರೀಯ ನಾಯಕರ ಹಾಗೂ ಮಹಾತ್ಮರ ಜಯಂತಿಗೆ ಆಹ್ವಾನಿಸಿದಾಗ ಸೌಜನ್ಯದಿಂದ ಬರುವುದನ್ನು ಕಲಿತುಕೊಳ್ಳಬೇಕು , ಜಾತಿಯತೆಯ ಕಾರಣದಿಂದ ದೂರ ಉಳಿದರೆ ನಿಮ್ಮನ್ನು ಐದು ವರ್ಷ ಕಳಿಸಿದ್ದು ಏತಕ್ಕೆ?ನೀವು ನಮಗಾಗಿ ಪ್ರಾಮಾಣಿಕ ಸೇವೆ ಮಾಡಿದ್ದೀರಾ? ಮಾಡದಿದ್ದರೆ ಏಕೆ ಮಾಡಲಿಲ್ಲ? ಎಂದು ಕೇಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ನಿಮ್ಮ ಅಧ್ಯಕ್ಷ ಸ್ಥಾನ ಸದಸ್ಯ ಸ್ಥಾನ ಗೌಡಕಿ ಬಂದಿರುವುದು ಅಂಬೇಡ್ಕರಸಂವಿಧಾನದಿಂದ ಎಂಬುದನ್ನು ಇನ್ನಾದರೂ ದೃಡಢಸಿಕೊಳ್ಳಿ ಎಂದು ತಿಳುವಳಿಕೆ ನೀಡಿದರು.

ವೇದಿಕೆ ಮೇಲೆ ವಿಜಯಪುರ ಡಿ.ಎಸ್. ಎಸ್ ಜಿಲ್ಲಾ ಸಂಜಾಲಕರಾದ ಚಂದ್ರಕಾಂತ ಸಿಂಗೆ, ಮಹೇಶ್ ಚಲವಾದಿ, ಜೈ ಭೀಮ್ ಮುತ್ತಗಿ, ಪ್ರಭುಗೌಡ ಪಾಟೀಲ್, ಆನಂದ ದೊಡಮನಿ,
ಬಸನಗೌಡ ಮಾಡಗಿ, ಎಸ್ ವಿ ಕಟ್ಟಿಮನಿ ಮುತ್ತಪ್ಪ ಚಮಲಾಪುರ,
ರಾಮನಗೌಡ ಸಂಕನಾಳ, ಮಲ್ಲಿಕಾರ್ಜುನ ಎಸ್. ಎಮ್. ಪ್ರಭಾಕರ್ ಗುಡುಗುಂಟೆ ಶಾಂತಪ್ಪ ಚಲವಾದಿ, ರಮೇಶ್ ಹೊನ್ನಳ್ಳಿ, ದೇವೇಂದ್ರ ಹಾದಿಮನಿ, ನಾಗೇಶ್ ಕಟ್ಟಿಮನಿ, ಕಾಶಿನಾಥ ಕಾರಿಗನೂರ್, ಮಾಂತೇಶ್ ಕಟ್ಟಿಮನಿ,
ಶಿವಲಿಂಗಪ್ಪ ಸಾಹುಕಾರ ಡವಳಗಿ, ಅವಪ್ಪಗೌಡ ಹೊಸಮನಿ, ಬಸನಗೌಡ ನಾಡಗೌಡ್, ಭೀಮನಗೌಡ ಮಂಗ್ಯಾಳ, ಮಡಿವಾಳಪ್ಪ ಗೌಡ ಪಾಟೀಲ್, ಭೀಮನಗೌಡ ಪಾಟೀಲ್,ಅನಿಲ್ ಕುಮಾರ್ ಗೊಟಗುಣಕಿ, ನಬಿ ರಸೂಲ್ ನಾಯ್ಕೋಡಿ, ಮಹೇಶ ಕಾರ್ಯಕ್ರಮ ನಿರ್ವಹಿಸಿದರು. ಈಶ್ವರಲಿಂಗ ವಂದಿಸಿದರು.

# ಜಾತಿ ಗಣತಿಯಲ್ಲಿ ಲಂಬಾಣಿ ಜಾತಿ ಎಂದು ನಮೂದಿಸಲು ಕರೆ

**ಇಂಡಿ:** ಪರಿಶಿಷ್ಟಜಾತಿ ಗಳಲ್ಲಿ ಉಪಜಾತಿಯ ಗಣತಿ ಕಾರ್ಯ ಪ್ರಾರಂಭವಾಗಿದೆ. ಅದಕ್ಕಾಗಿ ಎಲ್ಲಾ ಬಂಜಾರಾ ಬಂಧುಗಳು ತಪ್ಪದೆ ಕಡ್ಡಾಯವಾಗಿ, ಜಾತಿ ಗಣತಿಯಲ್ಲಿ ಲಂಬಾಣಿ ಜಾತಿ ಎಂದು ನಮೂದಿಸಲು ಇಂಡಿ ತಾಲೂಕಿನ ಆಲ ಇಂಡಿಯಾ ಬಂಜಾರಾ ಸೇವಾ ಸಂಘದ ತಾಲೂಕು ಅಧ್ಯಕ್ಷ ಸಂಜೀವ ಚವ್ಹಾಣ ಕರೆನೀಡಿದರು.

ಅವರು ಪತ್ರಿಕಾ ಪ್ರಕಟಣೆ ಮೂಲಕ ಕರೆ ನೀಡಿ ಪ್ರತಿಯೊಂದು ತಾಂಡಾಗಳಲ್ಲಿ ಗ್ರಾಮ, ಪಟ್ಟಣಪ್ರದೇಶಗಳಲ್ಲಿ,ಪುರಸಭೆವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಂಜಾರಾ ಸಮಾಜದ ನೌಕರರು. ಅಧಿಕಾರಿಗಳು ಉಪಜಾತಿಯಲ್ಲಿ ಪರಿಶಿಷ್ಟಜಾತಿ ಎಂದು ಜಾತಿಯಲ್ಲಿ ಲಂಬಾಣಿ ಎಂದು ಗಣತಿ ದಾರರ ಮುಂದೆ ಹಾಜರಿದ್ದು ಕಡ್ಡಾಯವಾಗಿ ಗಣತಿಯಲ್ಲಿ ಜಾತಿ ನಮೂದಿಸಲು ಆಧಾರ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರ ಇಟ್ಟುಕೊಳ್ಳಿ ಯಾರು ಈ ಗಣತಿಯಿಂದ ವಂಚಿತರಾಗದೆ ಮಕ್ಕಳ್ ಭವಿಷ್ಯಕ್ಕಾಗಿ ತಾಲೂಕಿನ ಪ್ರತಿಯೊಂದು ತಾಂಡಾದ ನಾಯ್ಕ. ಕಾರಭಾರಿ. ಡಾವ, ಸಾಣ, ಹಾಗೂ ಯುವಕರು ಎಲ್ಲರೂ ಕೂಡಿ ತಾಂಡಾಗಳಲ್ಲಿಡಂಗುರ್‌ಸಾರಿಸಿಗಣತಿಯಲ್ಲಿ ಭಾಗವಹಿಸಿಬೇರೆಕಡೆಗೆವಲಸೆಹೋದವರು ಗಣತಿಯಲ್ಲಿ ಭಾಗವಹಿಸಬೇಕು. ಚುನಾಯಿತ ಪ್ರತಿನಿಧಿಗಳಾದ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಸದಸ್ಯರು ಪುರಸಭೆ ಅಧ್ಯಕ್ಷರು ಸದಸ್ಯರು ಹಾಗೂ ಸಂಘಸಂಸ್ಥೆಗಳ ಮುಖಂಡರು,ರಾಜಕೀಯ ಮುಖಂಡರು ಎಲ್ಲರೂ ಹೆಚ್ಚಿನ ರೀತಿಯಲ್ಲಿ ಜಾಗ್ರತಿ ವಹಿಸಿ. ಗಣತಿಯಿಂದ ನಮ್ಮ ಜನಾಂಗದವರು ಹೊರಗೆ ಉಳಿಯದಂತೆ ಎಚ್ಚರವಹಿಸಬೇಕಾಗುತ್ತದೆ. ಆದ್ದರಿಂದ ಇಂಡಿತಾಲೂಕಿನಎಲ್ಲಾತಾಂಡಾದದೈವಸ್ಥರು ಸಂಘಸಂಸ್ಥೆಗಳ ಪದಾಧಿಕಾರಿಗಳು, ಎಲ್ಲಾ ಜನಪ್ರತಿನಿದಿನಗಳು ಈ ಕುರಿತು ಆದ್ಯತೆ ಕೊಟ್ಟು ಈ ಗಣತಿಯಿಂದ ಯಾರು ದೂರು ಉಳಿಯದಂತೆ ಎಲ್ಲರೂ ಜಾಗೃತಿ ಮೂಡಿಸಬೇಕೆಂದು ಹಾಗೂ ಎಲ್ಲರೂ ಕೂಡ ತಮ್ಮ ತಮ್ಮ ಕೆಲಸಗಳನ್ನು ಬದಿಗೊತ್ತಿ, ಗಣತಿಯ ಸಮಯದಲ್ಲಿ ಹಾಜರಿದ್ದು, ಜಾತಿಯ ಕಾಲಂನಲ್ಲಿ ಲಂಬಾಣಿ ಎಂದು ನಮೂದಿಸಬೇಕೆಂದು ಈ ಪ್ರಕಟಣೆ ಮೂಲಕ ಮನವಿ ಮಾಡಿದರು.

# ರಾಜ್ಯದಲ್ಲಿ ರೈಲ್ವೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ

**ಕೊಟ್ಟೂರು :** ಉಜ್ಜಯಿನಿ ಜಗದ್ಗುರುಗಳ ಸೂಚನೆಯಂತೆ ಉಜ್ಜಯಿನಿ ಮಾರ್ಗವಾಗಿ ಕೊಟ್ಟೂರು ಚಿತ್ರದುರ್ಗ ಹೊಸ ರೈಲ್ವೆ ಸಂಚಾರಕ್ಕಾಗಿ ಶೀಘ್ರದಲ್ಲಿ ಮಾರ್ಗದ ಸರ್ವೆ ಕಾರ್ಯಕ್ಕೆ ಆದೇಶ ನೀಡುತ್ತೇನೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ತಾಲೂಕಿನ ಉಜ್ಜಯಿನಿಯಲ್ಲಿ ನಡೆದ ಶಿಖರ ತೈಲಾಭಿಷೇಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ಸುದ್ದಿಗಾರರೊಂದಿಗೆ ಅವರು ಶನಿವಾರ ಮಾತನಾಡಿದರು.

ಈ ಭಾಗದ ಜನತೆಯ ಅನುಕೂಲಕ್ಕಾಗಿ ಮತ್ತು ಕೊಟ್ಟೂರು ಉಜ್ಜಯಿನಿ ಧಾರ್ಮಿಕ ಕ್ಷೇತ್ರಗಳಿಂದ ಚಿತ್ರದುರ್ಗಕ್ಕೆ ತೆರಳುವ ಪ್ರಯಾಣಿಕರಿಗೆ ಬಹು ಅನುಕೂಲವಾಗುವ ದೃಷ್ಟಿಯಿಂದ ಜಗದ್ಗುರುಗಳು ಹೇಳಿದ್ದು, ಇದನ್ನು ತಪ್ಪದೇ ಜಾರಿ ಮಾಡುತ್ತೇನೆ. ಕೊಟ್ಟೂರು ಮಾರ್ಗವಾಗಿಯೂ ಬೇಡಿಕೆಯಂತೆ ರೈಲ್ವೆ ಸಂಚಾರದ ಕುರಿತು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ ಎಂದರು.



12ಲಕ್ಷಕ್ಕೂ ಹೆಚ್ಚು ಕನ್ನಡ ಭಾಷೆಯ ನೌಕರರು ರೈಲ್ವೆ ಇಲಾಖೆಯಲ್ಲಿದ್ದಾರೆ. ಇವರಿಗೆ ಅನುಕೂಲವಾಗುವ ದೃಷ್ಟಿಯಿಂದಲೇ ಪರೀಕ್ಷೆಯನ್ನು ಕನ್ನಡ ಭಾಷೆಯಲ್ಲಿ ಬರೆಯಲು ಮಾಡಿದ ಮನವಿಗೆ ಪ್ರಧಾನಿಗಳು ಒಪ್ಪಿಗೆ ನೀಡಿದ್ದಾರೆ. ಇದರೊಂದಿಗೆ 10 ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಗೂ ಅವಕಾಶ ನೀಡಿದೆ ಎಂದರು.

ನಮ ರಾಜ್ಯದಲ್ಲಿ ರೈಲ್ವೆಗೆ ಸಂಬಂಧಿಸಿದಂತೆ ಅಭಿವೃದ್ಧಿಕೈಗೊಳ್ಳಲುರೈಲ್ವೆಖಾತೆಸಚಿವರಾದ ವೈಷ್ಣವಿ ಅಶ್ವಿನ್ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಕಳೆದ 30ವರ್ಷಗಳಿಂದ ಸ್ಥಗಿತವಾಗಿದ್ದ 45 ಕೋಟಿ ರೂ.ಗಳ 11 ರೈಲ್ವೆ ಯೋಜನೆಗಳಿಗೆ ಚಾಲನೆ ಸಿಕ್ಕಿದೆ. ಅಲ್ಲದೇ ಸ್ಥಗಿತವಾಗಿದ್ದ 45 ರೈಲ್ವೆ ಮಾರ್ಗಗಳಿಗೆ ಚಾಲನೆ ನೀಡಿದೆ. ತಳಕವಾಡಿ, ಕುಷ್ಟಗಿ, ಹುಬ್ಬಳ್ಳಿ ಮಾರ್ಗದ ರೈಲ್ವೆಗೆ ಏ.14ರಂದು ಹಸಿರು ನಿಶಾನೆ ತೋರಲಾಗುತ್ತಿದೆ. ಅಂಕೋಲಾ ಬೆಂಗಳೂರು ಮಾರ್ಗಕ್ಕೆ ಸರ್ವೆ ನಡೆಯುತ್ತಿದೆ. ತುಮಕೂರು ರಾಯದುರ್ಗ, ತುಮಕೂರು ದಾವಣಗೇರೆ ಮಾರ್ಗಕ್ಕೆ ಭೂಮಿ ಪಡೆಯುವ ಕೆಲಸ ಮುಗಿದಿದ್ದು ಕಾಮಗಾರಿ ಆರಂಭಿಸಲಾಗುವುದು.

ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರ ನೀಡಬೇಕಾದ ಅನುದಾನದ ಪಾಲು ಸಿಗುತ್ತಿಲ್ಲ ಹೀಗಾಗಿ ರೈಲ್ವೆ ಮೇಲ್ಸುತುವೆಗೆ ಕೇಂದ್ರವೇ ಶೇ.100ರಷ್ಟು ವೆಚ್ಚ ಭರಿಸುತ್ತಿದೆ. ರಾಜ್ಯದ 46 ರೈಲ್ವೆ ನಿಲ್ದಾಣಗಳನ್ನು 2 ಸಾವಿರ ಕೋಟಿ ರೂ.ಗಳಲ್ಲಿ ಮೇಲ್ದರ್ಜೆಗೇರಿಸಿದೆ ಎಂದು ಹೇಳಿದರು. ಉಜ್ಜಯಿನಿ ಜಾತ್ರೆಗೆ ತಾವು ಚಿಕ್ಕವರಿದ್ದಾಗ ತಾಯಿಯವರು ಕರೆದುಕೊಂಡು ಬರುತ್ತಿದ್ದರು ಎಂದು ಮೆಲಕುಹಾಕಿದಸಚಿವರು,ಉಜ್ಜಯಿನಿಶಿಖರ ತೈಲಾಭೀಷೇಕ ರಾಷ್ಟ್ರದಲ್ಲಿಯೇ, ಧರ್ಮ ಪರಂಪರೆಯಲ್ಲಿಯೇ ವಿಶೇಷವಾಗಿದ್ದು ಅದನ್ನು ನೋಡುವ ಭಾಗ್ಯ ನನ್ನದಾಯಿತು ಎಂದರು. ಮಾಜಿ ಸಚಿವ ಬಿ.ಶ್ರೀರಾಮುಲು, ಕೂಡ್ಲಿಗಿ ಮಂಡಲ ಬಿಜೆಪಿ ಅಧ್ಯಕ್ಷ ನಾಗರಾಜ ಕಾಮಶೆಟ್ಟಿ ಸೇರಿ ಇತರರು ಇದ್ದರು.

# ರಾಯಲ್ ವೃತ್ತದ ಕಾಮಗಾರಿ ಬೇಗನೆ ಮುಗಿಸಿ: ಯು. ಉರುಕುಂದ ರೆಡ್ಡಿ ಆಗ್ರಹ

**ಬಳ್ಳಾರಿ :** ಬಳ್ಳಾರಿ ನಗರ ಹೃದಯ ಭಾಗದಲ್ಲಿರುವ ರಾಯಲ್ ವೃತ್ತದಕಾಮಗಾರಿಪ್ರಾರಂಭಿಸಿ ಐದುವರ್ಷ ಕಳೆದರೂ ಇನ್ನು ಕಾಮಗಾರಿ ಮುಗಿದಿರುವುದಿಲ್ಲ, ಆಮೆಗತಿಯಲ್ಲಿ ಕೆಲಸ ನಡೆಯುತ್ತಿರುವುದರಿಂದ ಸಾರ್ವಜನಿಕರು ತುಂಬಾ ಬೇಸರವನ್ನು ವ್ಯಕ್ತಪಡಿಸಿದ್ದಾರೆ ಕೂಡಲೇ ಟವರ್ ಸುತ್ತ ಮುತ್ತ ನಡೆಯುತ್ತಿರುವ ಕಾಮಗಾರಿಯನ್ನು ಪೂರ್ತಿಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕರ್ನಾಟಕ ಮಾನವ ಹಕ್ಕುಗಳ ಕಾವಲು ಸಮಿತಿ ಅಧ್ಯಕ್ಷ ಯು ಉರುಕುಂದ ರೆಡ್ಡಿ ತಿಳಿಸಿದ್ದಾರೆ.

ಗುತ್ತಿಗೆದಾರರು ತಮಗೆ ಬೇಕಾದಾಗ ಕಾಮಗಾರಿ ಮುಂದುವರಿಸುವುದು ಬೇಡವಾದಗ ನಿಲ್ಲಿಸುವುದು ಧೂಳಿನಿಂದ ಕೂಡಿದ ರಸ್ತೆ ಸಾರ್ವಜನಿಕ ವಾಹನ ಸಂಚಾರರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಈ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಪೂರ್ಣ ಗೂಳಿಸಿ ಸಾರ್ವಜನಿಕರ ಸಂಚಾರದ ವ್ಯವಸ್ಥೆಗೆ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಲ್ಲಿ ಒಟ್ಟಾಯಿಸಿದರು.

ಒಂದುವೇಳೆಕಾಲಮಿತಿಯೊಳಗೆಕಾಮಗಾರಿಮುಗಿಸದೆ ಹೋದರೆ ಮುಂದಿನ ದಿನಗಳಲ್ಲಿ ಕರ್ನಾಟಕ ಮಾನವ ಹಕ್ಕುಗಳ ಕಾವಲು ಸಮಿತಿ ಬೆಂಗಳೂರು ಸಂಘಟನೆ ಮತ್ತು ಕರ್ನಾಟಕ ಏಕೀಕರಣ ರಕ್ಷಣಾ ಸೇನಾ ಸಮಿತಿ ಕನ್ನಡ ಪರ ಒಕ್ಕೂಟ ಜಿಲ್ಲಾಧ್ಯಂತ ಉಗ್ರ ಹೋರಾಟ



ವನ್ನು ಹಮ್ಮಿ ಕೊಳ್ಳಲಾಗುತ್ತದೆ ಎಂದು ಕರ್ನಾಟಕ ಮಾನವ ಹಕ್ಕುಗಳ ಕಾವಲು ಸಮಿತಿ ಅಧ್ಯಕ್ಷ ಯು. ಉರುಕುಂದ ರೆಡ್ಡಿ ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಉಪ್ಪಾರ ಮಲ್ಲಪ್ಪ, ಊಳೂರು ಸಿದ್ದೇಶ್ ಸೇರಿದಂತೆ ಇತರರಿದ್ದರು.

# ಅಟ್ರಾಸಿಟಿ ಕೇಸ್ ದಾಖಲಾಗಿ ಹತ್ತು ದಿನ ಬಂಧಿಸದ ಪೊಲೀಸರು, ಪಿಎಸ್ಐ ಶಾಂತಮೂರ್ತಿ, ಡಿವೈಎಸ್ಪಿ ಪ್ರಸಾದ್ ಗೋಖಲೆ ನಿರ್ಲಕ್ಷ್ಯ: ಸಿ. ಆನಂದ್ ಕುಮಾರ್ ಆರೋಪ

**ಬಳ್ಳಾರಿ :** ಜೆಎಸ್‌ಡಬ್ಲ್ಯು ಕಾರ್ಖಾನೆ ರಸ್ತೆಗೆಂದು ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡು ಅದಕ್ಕೆ ಬದಲಾಗಿ ಭೂಮಿಯ ಮಾಲೀಕರಿಗೆ ಯೋಜನಾ ನಿರಾಶ್ರಿತ ಅಡಿಯಲ್ಲಿ ಉದ್ಯೋಗವನ್ನು ನೀಡದೆ ವಂಚಿಸಿರುವ ಕಾರ್ಖಾನೆಯ ವಿರುದ್ಧ ನ್ಯಾಯಾಲಯದಿಂದ ಆದೇಶ ತಂದರೂ ಸಹ ಆದೇಶವನ್ನು ಪಾಲಿಸದೆ ನಮಗೆ ಕಾರ್ಖಾನೆ ಕೆಲಸ ನೀಡಿರುವುದಿಲ್ಲ, ಇದನ್ನು ಪ್ರಶ್ನಿಸಿ ನಾವು ಹೈಕೋರ್ಟ್ ನಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಾಗ ಎಸ್ಸಿ ಎಸ್ಟಿ ದೌರ್ಜನ ಕಾಯ್ದೆ ಅಡಿಯಲ್ಲಿ ಕೇಸ್ ದಾಖಲಾಗಿರುತ್ತದೆ,

ಮುಖದ್ದಮೆ ದಾಖಲಾಗಿ ಹತ್ತು ದಿನ ಕಳೆದರೂ ಕುಡುತಿನಿ ಪೊಲೀಸ್ ಠಾಣೆಯ ಪಿಎಸ್ಐ ಶಾಂತಮೂರ್ತಿ ಮತ್ತು ಡಿ ವೈ ಎಸ್. ಪಿ ಪ್ರಸಾದ್ ಗೋಖಲೆ ನಿರ್ಲಕ್ಷ ವಹಿಸಿ ದಲಿತರಿಗೆ ಅನ್ಯಾಯ ಮಾಡಿದ್ದಾರೆ ಎಂದು ಪ್ರಜಾ ಪರಿವರ್ತನೆ ವೇದಿಕೆಯ ರಾಜ್ಯಧ್ಯಕ್ಷ ಸಿ ಆನಂದ್ ಕುಮಾರ್ ಕುಡಿತಿನಿ ಆರೋಪಿಸಿದ್ದಾರೆ.

ಅವರು ಹಿಂದೂ ಪತ್ರಿಕಾ ಮಾಧ್ಯಮದವರೊಂದಿಗೆ ಮಾತನಾಡಿ, ಕುಡಿತಿನಿ ಗ್ರಾಮದ ಸರ್ವೆ ನಂಬರ್ 1247 ಸಂಬಂಧಿಸಿದ ಜಮೀನುಗಳಲ್ಲಿ



ದೌರ್ಜನ್ಯದಿಂದ ಅತಿಕ್ರಮಿಸುವ ಮೂಲಕ ರಸ್ತೆ ಮಾಡಿಕೊಂಡು ಕಂಪನಿ ಅಭಿವೃದ್ಧಿ ಮಾಡಿಕೊಳ್ಳುವ ಮೂಲಕ ದಲಿತರನ್ನು ನಿರಂತರವಾಗಿ ಶೋಷಿಸುತ್ತಾ ದೌರ್ಜನ್ಯ ಎಸುಗುತ್ತಾ ಬಂದಿರುತ್ತಾರೆ,

ನಮ್ಮಿಂದ ಕೃಷಿ ಜಮೀನನ್ನು ವಶಪಡಿಸಿಕೊಂಡು ನಮಗೆ ಉದ್ಯೋಗ ನೀಡದೆ ವಂಚಿಸುತ್ತಿರುವ ಕಂಪನಿಯ ವಿರುದ್ಧ ಎಸ್. ಸಿ, ಎಸ್. ಟಿ ದೌರ್ಜನ್ಯ ಕಾಯ್ದೆಯನ್ವಯ ನ್ಯಾಯ ಕೊಡಿಸಲು ಸೆಲ್ ಗೆ ಮನವಿ ಮಾಡಿಕೊಂಡಿದ್ದೆವು. ಅದರಂತೆ ನಮಗೆ ಕೆಲಸ ಕೊಡಿ ಎಂದು ಆದೇಶ ನೀಡಿರುತ್ತಾರೆ, ಇಲ್ಲವಾದಲ್ಲಿ ಎಸ್. ಸಿ, ಎಸ್. ಟಿ, ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಮುಖದ್ಯಮೆ ದಾಖಲಿಸುವಂತೆ ಆದೇಶ ನೀಡಲಾಗಿತ್ತು.

ಈ ಪ್ರಕಾರ ಜಿಂದಾಲ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಅಟ್ರಾಸಿಟಿ ಕೇಸ್ ಅನ್ನು ದಾಖಲಿಸಲಾಗಿತ್ತು, ಕೇಸ್ ದಾಖಲಾಗಿ ಹತ್ತು ದಿನ ಕಳೆದರೂ ಇಲ್ಲಿಯವರೆಗೆ ಜಿಂದಾಲ್ ಅಧಿಕಾರಿಯನ್ನು ಬಂಧನ ಮಾಡಿರುವುದಿಲ್ಲ, ಕುಡಿತಿನಿ ಪೊಲೀಸ್ ಠಾಣೆಯ ಎಸ್ ಐ ಶಾಂತಮೂರ್ತಿ ಮತ್ತು ಡಿವೈಎಸ್ಪಿ ಪ್ರಸಾದ್ ಗೋಖಲೆ ಇವರುಗಳು ಜಿಂದಾಲ್ ಕಾರ್ಖಾನೆ ಜೊತೆ ಶಾಮೀಲಾಗಿ ಜಿಂದಾಲ್ ಕಾರ್ಖಾನೆಯ ವ್ಯವಸ್ಥಾಪಕರನ್ನು ಇಲ್ಲಿಯವರೆಗೂ ಬಂದಿಸದೆ ಕಾಲಹರಣ ಮಾಡುತ್ತಿದ್ದಾರೆ ಇದು ನಮಗೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಅಟ್ರಸಿಟಿ ಕೇಸ್ ದಾಖಲಾದ ಕೂಡಲೇ ಆರೋಪಿತರನ್ನು ಬಂಧಿಸಬೇಕು ಅಥವಾ ಅವರಿಗೆ ಜಾಮೀನು ನೀಡಬೇಕು ಇದು ಯಾವುದೂ ಇಲ್ಲದೆ ಆರೋಪಿತರು ಹೊರಗಡೆ ರಾಜ ರೋಷವಾಗಿ ತಿರುಗುತ್ತಿದ್ದಾರೆ, ಪೊಲೀಸರನ್ನು ಕೇಳಿದರೆ, ಆರೋಪಿತರು ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನೆಲ್ಲ ನೋಡಿದಲ್ಲಿ ಪೊಲೀಸರು ಆರೋಪಿಯ ಜೊತೆ ಶಾಮಿಲ್ ಆಗಿದ್ದಾರೆ ಎಂದು ಅನುಮಾನ ಮೂಡುತ್ತಿದೆ ಎಂದರು.

ಹೀಗಿರುವ ಪೊಲೀಸ್ ಠಾಣೆ ಜಿಂದಾಲ್ ಕಾರ್ಖಾನೆಯ ಸ್ಥಳದಲ್ಲಿ ಮತ್ತು ಕಟ್ಟಡದಲ್ಲಿ ಇರುವುದರಿಂದ ಅವರ ಮುಲಜಿಗೆ ಒಳಗಾಗಿ ಪೊಲೀಸ್ ಇಲಾಖೆ ಹೀಗೆ ದಲಿತರನ್ನು ರಕ್ಷಿಸಿದೆ ನಿರ್ಲಕ್ಷ ಮಾಡುತ್ತಿದೆ ಎಂದು ಕಿಡಿಕಾರಿದರು.

ಒಂದು ವಾರದಲ್ಲಿ ಆರೋಪಿತರನ್ನು ಬಂಧಿಸಿದೆ ಹೋದಲ್ಲಿ ಎಸ್ ಪಿ, ಐಜಿಪಿ ಡಿಜಿಪಿ ಮತ್ತು ಗೃಹ ಮಂತ್ರಿಗಳಿಗೆ ದೂರು ನೀಡಲಾಗುವುದು ಜೊತೆಗೆ ಜಿಂದಾಲ್ ಕಾರ್ಖಾನೆಯ ಮೇನ್ ಗೇಟ್ನಲ್ಲಿ ನೂರಾರು ಜನ ರೈತರೊಂದಿಗೆ ಗೇಟ್ ಬಂದು ಮಾಡಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿ ಹನುಮಂತಪ್ಪ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಬಸಪ್ಪ ಕುಡಿತಿನಿ, ರೈತರದ ಸಿ ತಿಪ್ಪಯ್ಯ ಸಿ ರಾಮಪ್ಪ ಸೇರಿದಂತೆ ಜಮೀನು ಕಳೆದುಕೊಂಡ ಹಲವಾರು ರೈತರಿದ್ದರು.

# ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಸಾಮೂಹಿಕ ವಿವಾಹ

**ಕೊಟ್ಟೂರು :** ತಾಲೂಕಿನ ಉಜ್ಜಯಿನಿ ಸದ್ಧರ್ಮಪೀಠದಶ್ರೀಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವದ 5ನೇ ದಿನದ ಕಾರ್ಯಕ್ರವಾಗಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಬುಧವಾರ ಮಾತನಾಡಿದರು.



**ದಾಂಪತ್ಯ ಎನ್ನುವುದು ಗಂಡು ಹೆಣ್ಣಿನ ಬೆಸುಗೆ ಮಾತ್ರವಲ್ಲದೇ ಎರಡು ಕುಟುಂಬಗಳ ಬಾಂಧವ್ಯ ಬೆಳೆಸುವುದಾಗಿದೆ. ಗಂಡು ಹೆಣ್ಣು ಸಮನಾಗಿ ನಡೆದುಕೊಂಡು ಬಾಳಿನಲ್ಲಿ ಬೆಳಕು ಕಾಣಬೇಕು ಎಂದು ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾ ಸ್ವಾಮಿಗಳು ಹೇಳಿದರು.**

ಸಾಮೂಹಿಕ ವಿವಾಹ ಕಾರ್ಯಗಳ ಮೂಲಕ ಮನೆಯಲ್ಲಿ ಮದುವೆ ಮಾಡುವುದಕ್ಕಾಗಿ ವ್ಯಯ ಮಾಡುವ ದುಂದು ವೆಚ್ಚಕ್ಕೆ ಕಡಿವಾಣ ಹಾಕಬಹುದು. ತಮ್ಮ ಪೀಠ ಸೇರಿದಂತೆ ಅನೇಕ ಮಠಗಳು ಸಾಮೂಹಿಕ ವಿವಾಹ ಕಾರ್ಯಗಳನ್ನು ನಡೆಸುತ್ತಲಿವೆ. ಇಂತಹ ಕಾರ್ಯಗಳಲ್ಲಿ ದಾಂಪತ್ಯಕ್ಕೆ ಕಾಲಿರಿಸುವವರಿಗೆ ಅನೇಕ ಸ್ವಾಮೀಜಿಗಳ ಮುಖಂಡರ ಆರ್ಶೀವಾದ ಸಿಗುತ್ತದೆ ಎಂದರು.

ಸಾಮೂಹಿಕ ವಿವಾಹ ಕೇವಲ ಬಡ ಹಾಗೂ ಮಧ್ಯಮ ವರ್ಗದವರಿಗೆ ಸೀಮಿತ ಎಂಬ ಭಾವನೆ ತೊಡೆದು ಹಾಕಬೇಕು. ಆಯೋಜನೆಗೊಳ್ಳುವ ಸಾಮೂಹಿಕ ವಿವಾಹಕಾರ್ಯಕ್ರಮಗಳಲ್ಲಿಉಳ್ಳವರಮನೆಯವರೂ ಮದುವೆಯಾಗಿಉಳಿದವರಿಗೆ ಮಾದರಿಯಾಗಬೇಕು. ತಮ್ಮ ಪೀಠದಿಂದ ಪ್ರತಿ ವರ್ಷದ ಕಾರ್ತಿಕೋತ್ಸವ, ರಥೋತ್ಸವ ಸಂದರ್ಭಗಳಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಇದಕ್ಕೆ ಅನೇಕ ಮುಖಂಡರು ಸಹಕಾರ ನೀಡುತ್ತಿದ್ದಾರೆ. ಈ ವರ್ಷದಲ್ಲಿ ಅನೇಕ ಭಾಗಗಳ 08 ಜೋಡಿಗಳು ಮದುವೆಯಾಗಿದ್ದಾರೆ ಎಂದು ಹೇಳಿದರು.

ಡೋಣೂರು ಚಾನುಕೋಟಿ ಮಠ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ, ಮತ್ತು ಸದಸ್ಯರು ದೇವಸ್ಥಾನದ ವ್ಯವಸ್ಥಾಪಕ ವೀರೇಶ್, ಮುಖಂಡರಾದ ರ್ರಿಸ್ವಾಮಿ, ಮರುಳಸಿದ್ದಪ್ಪ, ಲೋಕೇಶ್, ಇತರರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618